ಕೊರವಂಜಿ

ಸಂಪುಟ ೧೧ ನವಂಬರ್ ೧೯೫೨ ಸಂಚಿಕೆ ೮

ಕುಹಕಿಡಿಗಳು

ಪ್ರತಿನಿಧಿ ಸಭೆ ಮೊದಲಾಗುವುದಕ್ಕೆ ಮುಂಚೆ ದೇವರನ್ನು ಪ್ರಾರ್ಥಿಸಬೇಕಾದ್ದು ಅತ್ಯವಶ್ಯಕವೆಂದು ಒಬ್ಬರು ಸಲಹೆ ಇತ್ತಿದಾರೆ....ಅವರಿಗೆ ಪ್ರತಿನಿಧಿಗಳ ಪರಿಚಯ ಚೆನ್ನಾಗಿದೆ ಎಂದು ತೋರುತ್ತದೆ.

* * *

ಡೆಲ್ಲಿಯಲ್ಲಿ ಪ್ರತ್ಯೇಕವಾದ ಅಶಕ್ತ ಪೋಷಕ ಸಭೆ ಬೇಕಿಲ್ಲವೆಂದು ಅಲ್ಲಿನ ಸೆಕ್ರಿಟೇರಿಯಟ್ ವಠಾರದಲ್ಲಿ ಹೇಳಲಾಗಿದೆ.

* * *

ಮಂತ್ರಿಗಳು ಹಳೆಯ ಕಾರುಗಳಲ್ಲೇ ಓಡಾಡಿದರೆ, ಅವರನ್ನು ತಮ್ಮ ತಮ್ಮ ಊರು ಬೀದಿಗಳಲ್ಲಿ ವಾಹನ ನೂಕಿ ಉಪಚರಿಸಿ ಆದರಿಸಬಹುದಲ್ಲಾ, ಎಂಬುದೇ ಹಳ್ಳಿಗರ ಹೆಬ್ಬಯಕೆಯಂತೆ.

* * *

"ಧಾರವಾಡದಲ್ಲಿ ನೂರಾರು ಜನ ನಿರಾಶ್ರಿತರು"....ನೀರಾಶ್ರಿತರಿರಬೇಕು.

* * *

"ನಾನೇನಾದರೂ ಒಂದು ದಿನದ ಮಟ್ಟಿಗೆ ಸರ್ವಾಧಿಕಾರಿಯಾಗಿದಿದ್ದರೆ........" ಎಂದು ಮಾಜಿ ಗವರ್ನರ್ ಮೋಡಿಯವರು ಭಾಷಣವನ್ನು ಪ್ರಾರಂಭಿಸಿದರು......... ಏನು ಮಾಡುತ್ತಿದ್ದರು? ಮೋಡಿ ಹಾಕುತ್ತಿದ್ದರು.

*　　　　*　　　　*

"ನನ್ನ ಅನುಭವದಲ್ಲಿ, ಮಹಾಜನಗಳು, ಸದಾ ಭಾಷಣ ಮಾಡುವ ಮಂತ್ರಿಗಳನ್ನೂ, ಇತರ ಮಂತ್ರಿಗಳಂತೆಯೇ"....

—ತಾಳಿ! ಇತರ ಮಂತ್ರಿಗಳು ಯಾರಾದರೂ ಇದಾರೇನು?

*　　　　*　　　　*

"ಕಾರಿನಿಂದ ಇಳಿಯುತ್ತಲೂ, ಶ್ರೀ........ರ ಹೃದಯಕ್ರಿಯೆ ನಿಂತಿತು (ಸುದ್ದಿ) ಹಿಂದೆಂದೂ ಹೀಗಾಗಿರಲಿಲ್ಲವೆಂದು ಶ್ರೀ. ..ರ ವೈದ್ಯರು ಪ್ರಕಟಣೆ ಹೊರಡಿಸಿರುವರು.

*　　　　*　　　　*

ಈಚೆಗೆ ಅಚ್ಚಾಗುತ್ತಿರುವ ಹೊಸವಿಧಾನದ, ಆಹ್ವಾನ ಪತ್ರಿಕೆಗಳಿಂದ, ತಮ್ಮ ತಂದೆ ತಾಯಿ ಇಬ್ಬರಿಗೂ, ಒಂದೇ ದಿನವೇ ಮದುವೆ ನಡೆಯಿತೆಂದು ಮಕ್ಕಳು ಅರಿತುಕೊಳ್ಳಬಹುದಾಗಿದೆ.

*　　　　*　　　　*

ಕಪಿಗಳಿಂದ ಬಂದದ್ದಲ್ಲ ನಮ್ಮ ಸಂತತಿ, ಎಂದು ಪ್ರಾಧ್ಯಾಪಕರೊಬ್ಬರು ವಾದಿಸಿದರಂತೆ........ಹಾಗೆ ಅವರೊಂದಿಗೆ ಹೇಳಿದವರಿಗೆ ಏನು ನಿದರ್ಶನವಿತ್ತೋ, ನಮಗೆ ತಿಳಿಯದು.

*　　　　*　　　　*

ಆಧುನಿಕ ಕವಿಗಳೊಬ್ಬರ ಕವನಗಳು ಅತ್ಯಂತ ಜನಪ್ರಿಯವಾಗಿವೆ (ಭಾಷಣ) ಅದಕ್ಕೇನು? ಅವುಗಳನ್ನು ಪಠ್ಯ ಪುಸ್ತಕದಲ್ಲಿ ಸೇರಿಸಿದರೆ ತೀರಿತು.

*　　　　*　　　　*

ಉಚಿತ ವೈದ್ಯ ಸಹಾಯದ ಸೌಲಭ್ಯವನ್ನು ಪಡೆದಿರುವ ಕೆಳದರ್ಜೆ ನೌಕರರು ಹಸಿವನ್ನೂ ಒಂದು ರೋಗವೆಂದು ಭಾವನೆಮಾಡಬೇಕೆಂದು ರಾಜಾಜಿಗೆ ಮನವಿ ಮಾಡಿಕೊಂಡಿರುವರಂತೆ.

ಉರಿಗಾಳು

"ಏನಕೇನ ಪ್ರಕಾರೇಣ, ಜಗತ್ ಶಾಂತಿಯನ್ನು ಸ್ಥಾಪಿಸಲೇ ಬೇಕು" (ಭಾಷಣ) ಆದರೆ, ಯೂನೊಕೇನ ಪುಕಾರೇಣ ಮಾತ್ರ, ಅದು ಸಾಧ್ಯವಾಗುವುದಿಲ್ಲ.

* * *

ವಿಶ್ವವಿದ್ಯಾನಿಲಯ ಎಂದಮೇಲೆ, ಅಲ್ಲಿ ಎಲ್ಲ ತರಹದ ವಿದ್ಯೆಗೂ ಅವಕಾಶವೂ ಮನ್ನಣೆಯೂ ಇರಬೇಕಾದದ್ದಲ್ಲವೆ, ಎಂದು ಹಲವು ಹುಡುಗರು ಸವಾಲು ಹಾಕಿರುವ ರಂತೆ.

* * *

ಯಾವ ತಿಂಗಳುಗಳಲ್ಲಿ, ಯಾವ ನಕ್ಷತ್ರಗಳಲ್ಲಿ ಮದುವೆ ಮಾಡಿಕೊಳ್ಳ ಬಾರದು, ಎಂಬ ಪ್ರಶ್ನೆಗೆ ಜೋಯಿಸರೊಬ್ಬರು, ಅದನ್ನು ಅವರವರ ಅನುಭವ ದಿಂದ ಅವರವರೇ ಕಂಡುಕೊಳ್ಳಬೇಕು, ಎಂದರಂತೆ.

* * *

ಭಾರತೀಯರು ಇಂದು ತಮ್ಮ ಪಶುಸಂಪತ್ತನ್ನು ವೃದ್ಧಿಪಡಿಸಿಕೊಳ್ಳಬೇಕಾ ಗಿದೆ....ದೈವಿ ಸಂಪತ್ತು ಹಾಳಾಗುತ್ತಿರುವುದಕ್ಕೆ ಇಂಥ ಬೋಧನೆಯೇ ಕಾರಣ.

* * *

ತಲೆನೋವಿಗೆ ಕಾರಣಗಳೇನು? ಎಂಬ ವಿಷಯದಮೇಲೆ ಡಾಕ್ಟರೊಬ್ಬರು ಭಾಷಣಮಾಡಿದರು....ಸಭಿಕರಿಗೆ ಅದು ಚೆನ್ನಾಗಿ ಮನದಟ್ಟಾಗಿರಬೇಕು.

* * *

ವೈಮಾನಿಕ ಗುಟ್ಟುಗಳನ್ನೆಲ್ಲ ತಮಗಿಂತ ಮೊದಲೇ ಅಮೇರಿಕಾದವರು ತಿಳಿದು ಪ್ರಕಟಿಸುತ್ತಾರೆ, ಎಂದು ಬ್ರಿಟಿಷ್ ಪತ್ರಿಕಾ ಕರ್ತರು ಅಸಮಾಧಾನಗೊಂಡಿರುವರು ....ಗಾಳಿ ಸಮಾಚಾರ ಇರಬೇಕು.

* * *

ಮಿಲ್ ಬಟ್ಟೆಯಮೇಲೆ ಗಜಕ್ಕೆ ೩ ಕಾಸಿನಂತೆ ಸುಂಕ ಹೇರಿ, ಕೈ ಮಗ್ಗದ ಬಟ್ಟೆಯ ವ್ಯಾಪಾರಕ್ಕೆ ಸಹಾಯಮಾಡುವಂತೆ ಕಾನೂನಾಗಿದೆ....ಬೇರೆ ಬಟ್ಟೆ ಕಾಣದೆ ಈ ರೀತಿ ಮಾಡಿರಬೇಕು.

* * *

ಪ್ರಾಣವನ್ನೇ ಕಳೆದುಕೊಳ್ಳೋಣ ಎಂಬಷ್ಟು ನೋವಾದಾಗಲೂ ಹಲವರು ಡಾಕ್ಟರಿಗೆ ಹೇಳಿ ಕಳುಹಿಸದೇ ಇರುವುದು ಆಶ್ಚರ್ಯ....ಹೌದು, ಆಗ, ಡಾಕ್ಟರೇ, ಅಂಥವರ ಪರಮಮಿತ್ರ.

* * *

ವಕೀಲಿ ಗುಮಾಸ್ತೆಯರು ಸಂಘ ಸೇರಿ, ತಮ್ಮನ್ನೂ ಶ್ರಮಜೀವಿಗಳಂತೆ ಪರಿಗಣಿಸಬೇಕೆಂದು ಮನವಿ ಮಾಡಿಕೊಂಡರು....ವಕೀಲರಿಂದ ಹಣ ಪಡೆಯಬೇಕಾದರೆ, ಶ್ರಮವೇ.

* * *

ಕೈಗಾರಿಕೆ ಕೂಲಿಗಾರರಿಗೆ ಮನೆಗಳನ್ನು ಕಲ್ಪಿಸಿಕೊಡಲು ೩೦ ಲಕ್ಷ ರೂಪಾಯಿ.... ...ಆದರೆ, ಅಷ್ಟು ಹಳ್ಳ ಕೊಳ್ಳಗಳು ಇನ್ನೂ ಇವೆಯೆ, ನಮ್ಮಲ್ಲಿ ?

* * *

ಶ್ರೀಮಂತ ವರ್ತಕರು, ಮೊನ್ನೆ ತೀರಿಕೊಂಡರಲ್ಲಾ, ಅವರು ಎಷ್ಟು ಆಸ್ತಿ ಬಿಟ್ಟು ಹೋದರು, ಎಂಬ ಪ್ರಶ್ನೆಗೆ........ಇದ್ದುದನ್ನೆಲ್ಲ, ಎಂಬುದೇ ಉತ್ತರ.

* * *

ಪ್ರಪಂಚದಲ್ಲಿ ಈಗ ಒಟ್ಟು ಒಂದು ಲಕ್ಷದ ಒಂದು ಸಾವಿರ ಸಿನಿಮ ಥಿಯೇಟರುಗಳಿವೆ....ಒಂದು ಥಿಯೇಟರಿಗೆ ಕೂಡ ಕಾಂಪ್ಲಿಮೆಂಟರಿ ಟಿಕೇಟ್ ದೊರೆಯದ ನಮಗೆ ಈ ಸುದ್ದಿ, ಹೃದಯವಿದ್ರಾವಕ.

* * *

"ಅವನ ವಹಿವಾಟೆಲ್ಲ ಲಕ್ಷ ಲಕ್ಷದ ಲೆಕ್ಕವೇ"....ಆತ, ಪೆನಿಸಿಲಿನ್ ವ್ಯಾಪಾರಿ ಇರಬೇಕು.

* * *

ಈ ವರ್ಷದ ಅಮೇರಿಕನ್ ಅಧ್ಯಕ್ಷ ಚುನಾವಣೆಯಿಂದ, ಅಮೇರಿಕನ್ನರ ಭಾಷೆಗೆ ೨೩೪೫ ಹೊಸ ಬೈಗಳು ಸೇರಿವೆ, ಎಂದು ಒಬ್ಬರು ಲೆಕ್ಕ ಹಾಕಿದಾರೆ.

* * *

"ಹಾಹಾ ಮೂವಿಸ್" ಎಂಬ ಒಂದು ಚಲನ ಚಿತ್ರ ಸಂಸ್ಥೆ....ಜನರ ಹಾಹಾಕಾರದಿಂದಲೇ ಅದು ಮಾಡಿರಬೇಕು.

ಕೊರವಾವಲೋಕನ

ಬಿಸಿಲು ತಕ್ಕಮಟ್ಟಿಗಿತ್ತು. ಆದರೆ ಹನಿಕೂಡ ತಕ್ಕಮಟ್ಟಿಗೆ ಹಾಕುತ್ತಾ ಇತ್ತು. ಹಾಕಿದ ಟೋಪಿ ನೆನೆಯಬೇಕು ಕೂಡಲೇ ಒಣಗಲೂ ಬೇಕು. ಹಾಗಿತ್ತು ಹವಾ ಮಾನ ನಾನು ಕ್ಲಬ್ಬಿಗೆ ಹೋದಾಗ.

ವರಾಂಡದಲ್ಲೇ ಕೊರವ, ಶಾಮು ಇಬ್ಬರೂ ಕೂತಿದ್ದರು. ಒಬ್ಬರ ಎದುರಿಗೆ ಒಬ್ಬರು; ಮದುವೆ ಗಂಡು, ಮದುವೆ ಹೆಣ್ಣು, ಹಿಂದಿನ ಕಾಲದಲ್ಲಿ ಕೂರುತಿದ್ದ ಜೋಡಿಯಂತೆ ಕೂತಿದ್ದರು. ಇಬ್ಬರೂ ಯಾವಾಗಲೂ ಕಿವಿಯಿಂದ ಕಿವಿತನಕ ನಗುತ್ತ ಇರುತ್ತಿದ್ದವರು. ಇವರಿಗೇನು ಬಂತು ? ಈ ಮೌನ ಅಂತ ಅನ್ನಿಸಿತು.

ಹೋದ ಮೇಲೆ ಕೊರವನ ಬೆನ್ನು ತಟ್ಟಿದೆ. ಇಲಿ ಸಿಂಹದ ಬೆನ್ನು ತಟ್ಟಿದಂತೆ. " ಏನು ಶಾಮು ಹೀಗೆ ಮೌನ ಏನಾಯ್ತು ನಿನಗೆ ? ಡಿಸ್ಪೆಂಡಿಯಾನ್" ಎಂದೆ.

ಕೊರವ ನನ್ನನ್ನು ನೋಡಿದ, ಬೆನ್ನೇಲಿ ಚಾಕು ಹಾಕಿದಹಾಗೆ ಹರಿತವಾಗಿ ನೋಡಿದ. ಈಗಿನ ಕಾಲದ ಸೊಸೆ ಕಂಡ ಅತ್ತೆಹಾಗೆ ಹಣ್ಣಾದೆ.

ಸುತ್ತಲೂ ಮೌನ. ಎಲ್ಲೆಲ್ಲೂ ಮೌನ. ಬಿಸಿಲು ಮಳೆಯೂ ಮೌನ. ನಾಯಿ ನರಿಗಳೂ ಮೌನ.

ನಾನೇ ಶುರು ಮಾಡಿದೆ. "ಅಲ್ಲೋ್ರೀ! ಶಾಮು ಹೋದ ವರ್ಷ ತಾನು ಕಟ್ಟಿಸಿದ ಗೃಹಪ್ರವೇಶದ ಊಟ ಇನ್ನೂ ಜ್ಞಾಪಕಇದೆ. ಏನು ಸೊಗಸಾದ ಕೇಸರಿ ಫೇಣಿ! ಮೂರು ತಿಂಗಳ ಹಿಂದೆ ಮಗಳ ಮದುವೆಮಾಡಿದ ಏನು ಸೊಗಸಾದ ಚಿರೋಟಿ !! ದಂರೋಟು !!!

ತಿಂದವರಿಗೆಲ್ಲಾ ದಂ ಬರೋ ಹಾಗಿತ್ತು. ಹೀಗೆಲ್ಲಾ ನಮ್ಮ ಮನಸ್ಸೆಲ್ಲಾ ಊಟದಕಡೆಗೇ ತಿರುಗಿಸಿದ್ದ ಈ ಶಾಮು ಹೀಗೇಕೆ ಮೌನ." ಎಂದೆ.

ಕೊರವ ನೋಡಿದ. ದೃಷ್ಟಿ ನನ್ನ ಕರುಳನ್ನೇಕೊಯ್ದ ಹಾಗಾಯ್ತು.

ಆ ವೇಳೆಗೆ ರಾಮು ಬಂದು ಶಾಮೂನ ಕರೆದ ಚೀಟ ಆಡುಕ್ಕೆ. ಆವನು ಹೋದ ಕೂಡಲೇ, ಕೊರವ ಹೇಳಿದ "ಅಲ್ಲವೋ ಗಾದೆ ಹೇಳಿದಹಾಗೆ, ಶಾಮು

ಮನೆಕಟ್ಟಿದ. ನಮಗೆಲ್ಲಾ ಪುಷ್ಕಳ ಊಟ, ಮರೆಯಲಾಗದ ಊಟ ಹಾಕಿದ, ಮಗಳ ಮದುವೆಮಾಡಿದ ಭರ್ಜರಿ ಭೋಜನ ಹಾಕಿದ. ಈಗ ಲೆಕ್ಕ ಎಲ್ಲಾ ಸರಿ ತೂಗಿಸಿದ ಅದಕ್ಕೇ ಹಾಗೆ ಮುಖ" ಅಂದ

"ಅರೆ ಗಾದೆ ಎಲ್ಲಿ ಬಂತೊ—ಈ ಮೌನದ ಮುಖಕ್ಕೆ" ಎಂದೆ.

—ಅದೇ ಕಣೋ! ಮನೆ ಕಟ್ಟಿ ನೋಡಿದ. ಚೆನ್ನಾಗಿತ್ತು. ಮದುವೆ ಮಾಡಿ ನೋಡಿದ ಹಿಂತಿರುಗಿ ನೋಡಿದ—ಆ ವೇಳೆಗೆ ಮನೆ ಮಾಯವಾಗಿತ್ತು. ಅದಕ್ಕೇ ಆ ಮೌನದ ಮುಖ ಅಂದ ಕೊರವ.

—ಬಲು ಕುಹಕೇಡಿ ಕೊರವ.

* * *

"ಬಲು ಹೆಚ್ಚಾಯಿತಪ್ಪಾ ಕಳ್ಳತನ ನಮ್ಮೂರಿನಲ್ಲಿ" ಅಂದ ಕೊರವ ನನ್ನ ತಟ್ಟೆಯಲ್ಲಿದ್ದ ಉಪ್ಪೇರಿನ ಮೂರು ಮೂರಾಗಿ ಕದಿಯುತ್ತ.

"ನಾವು ಹುಷಾರಾಗಿದ್ದರೆ ಕಳ್ಳರೇನು ಮಾಡಿಯಾರು" ಎಂದೆ.

ಎರಡು ಹಿಡಿ ಉಪ್ಪೇರಿ ತಿಂದು ಕೊರವ ಒಳ ಕೊಠಡಿಗೆ ಹೊರಟ. ಎರಡೇ ನಿಮಿಷದಲ್ಲಿ ಒಬ್ಬ ಹೊಸ ಮೊಗದ ಪರಿಚಾರಕ ಬಂದು 'ಸಾರ್ ಕೊರವ ಸಾಹೇಬರಿಗೆ ಫೌಂಟನ್‌ಪೇನ್ ಬೇಕಂತೆ, ಈಗಲೇ ಕಾಗದ ಬರೆದು ತಿರುಗಿ ಕಳಿಸುತ್ತಾರಂತೆ ಅಂದ.

ನೋಡುತ್ತಿದ್ದ ಚಿತ್ರದಪತ್ರಿಕೆಯನ್ನು ನೋಡುತ್ತಾಲೇ ಜೇಬಿನಲ್ಲಿದ್ದ ಫೌಂಟನ್‌ಪೆನ್ ತೆಗೆದುಕೊಟ್ಟೆ.

ಎರಡು ನಿಮಿಷ ಆಗೋ ಹೊತ್ತಿಗೆ ಕೊರವ ಹಿಂತಿರುಗಿ ಒಳ ಕೊಠಡಿಯಿಂದ ಬಂದ. 'ಪೆನ್ ಎಲ್ಲಯ್ಯಾ' ಎಂದು ಕೇಳಿದೆ.

'ಯಾವ ಪೆನ್ನು' ಎಂದ.

'ಈಗತಾನೆ ಪರಿಚಾರಕ ಬಂದು ನಿನಗೆ ಬೇಕು ಎಂದು ಕೇಳಿದ' ಎಂದೆ.

'ಯಾವ ಪರಿಚಾರಕ?'

ಇದ್ದ ಪರಿಚಾರಕರನ್ನೆಲ್ಲಾ ಕರೆಸಿ ನೋಡಿದೆ, ಗುರ್ತೇ ಸಿಗಲಿಲ್ಲ.

'ಕಳ್ಳತನ ಸುಲಭ ಅಲ್ಲವೇ' ಅಂತ ಹೇಳುತ್ತಾ ಕೊರವ ತನ್ನ ಒಳಜೇಬಿನಿಂದ ಪೆನ್ನನ್ನು ಹಿಂತಿರುಗಿಕೊಟ್ಟ. ಕ್ಲಬ್ಬಿನ ಮಾಲಿ ಕೈಲಿ ನಿನಗೆ ಹೇಳಿ ಕಳಿಸಿದೆ. ನೀನು ತಲೆ ಕೂಡ ಎತ್ತದೆ ಪರಿಚಾರಕನೇ ಇರಬೇಕು ಅಂತ ಕೊಟ್ಟೆ. ಇದೇ ಹುಷಾರು ನಮ್ಮದೆಲ್ಲಾ ಎಂದ.

ಮೂರೇ ಮೂರು ಹೆಜ್ಜೆ

ಅಜಿತ್ ಸಿಂಗರು, "ಯುದ್ಧಶಾಲಿ ಶ್ರೀಮಂತ"ರಾದ ಕೀರ್ತಿಲಾಲಸರು. ನಮ್ಮೂರಲ್ಲಿರುವ ಭಾರಿ ಬಡಾವಣೆಯಲ್ಲಿ ಅವರು ಕಳೆದ ವರ್ಷ ಐದಾರು ಬಂಗ್ಲೆಗಳನ್ನು ಕೊಂಡು ಕೊಂಡು, ಬಾಡಿಗೆ ದುಡಿಸಿ, ಸುಖಸಂಕಥಾ ವಿನೋದದಿಂದಿದಾರೆ.

ಆದರೆ, ಅವರನ್ನು ಯಾರೂ ಗೌರವಿಸುತ್ತಿಲ್ಲ; ಗೌರವ ಹಾಗಿರಲಿ, ಗುರುತು ಕೂಡ ಕಾಣರು. ನಮ್ಮೂರಲ್ಲಿ ದಿನಕ್ಕೆಂಟರಂತೆ ಅನಾವರಣೋತ್ಸವಗಳು ನಡೆಯುತ್ತವೆ; ಅವೊಂದಕ್ಕೂ ಅವರನ್ನು ಒಂದು ಪ್ರಾಣಿಕೂಡ ಆಹ್ವಾನಿಸುತ್ತಿರಲಿಲ್ಲ. ಪ್ರಾರಂಭೋತ್ಸವ, ಮುಕ್ತಾಯೋತ್ಸವ, ಷಷ್ಠಪೂರ್ತಿ, ಕುಕ್ಷಿಪೂರ್ತಿ, ನೇತ್ರಯಜ್ಞ, ದಂತಯಜ್ಞ, ಕೊನೆಗೆ ಒಂದು ಸತ್ಯನಾರಾಯಣ ಪೂಜೆ ಒಂದಕ್ಕೂ, ಊಹುಂ. ಇದೀಯಾ, ಇಲ್ಲವೆ ಎಂದು ಒಬ್ಬನೂ ಅಜಿತ್ ಸಿಂಗರಕಡೆ ಮೂಸಿ ನೋಡಲಿಲ್ಲ.

ಪಾಪ, ಸಿಂಗರಿಗಿಂತ ಸಿಂಗಿಯರಿಗೆ ಬಲು ವ್ಯಥೆ. ಕಾರಿದೆ, ಆಳಿದೆ, ಉದ್ಯಾನವಿದೆ, ಡೌಲಿದೆ ಡಬಡ್ಡಾಳಿಕೆ ಇದೆ,–ನಾಲ್ಕು ಜನರ ಬಾಯಿಂದ ಹೊಗಳಿಸಿಕೊಳ್ಳುವ, ನಾಲ್ಕು ಜನರ ಕೈಯಿಂದ ಅರ್ಚನೆ ಮಾಡಿಸಿಕೊಳ್ಳುವ ಭಾಗ್ಯಇಲ್ಲ.

ಕೊನೆಗೆ, ಮೊನ್ನೆ ಒಬ್ಬರು ಪಬ್ಲಿಸಿಟಿ ಏಜಂಟರು ಗಂಟುಬಿದ್ದರು, ಸಿಂಗರಿಗೆ. ಅಯ್ಯೋ! ಪೇಪರು ಪೇಪರಲ್ಲೆಲ್ಲ ನಿಮ್ಮ ಹೆಸರು ತುಂಬಿಸಿ ಬಿಡುತ್ತೇನೆ, ನಿಮ್ಮ ಬಂಗ್ಲಿ ಸಾಲು, ಎಲ್ಲವನ್ನೂ ಬಹಿರಂಗಪಡಿಸಿ, ನಾನಾ ಭಾಷೆಗಳಲ್ಲಿ ಮೂಲೆ ಮೂಲೆಗೂ ಪ್ರಚಾರಮಾಡಿಸುತ್ತೇನೆ, ಎಂದರು.

ಸಿಂಗರು, ದಂಪತಿಸಮೇತ, ಹಿಗ್ಗಿದರು. ಆತನ ಚಾರ್ಜುಕೂಡ ಅಷ್ಟೇನೂ ಹೆಚ್ಚಾಗಿರಲಿಲ್ಲ. ಅರ್ಧಲಕಾರ ಕೂಡ ಇಲ್ಲ; ಕೇವಲ ಎಂಟು, ಹತ್ತರಲ್ಲೇ ಮುಗಿಸಿದ.

ಆತ ಹಾಕಿಕೊಟ್ಟ ಕಾರ್ಯಕ್ರಮದಂತೆ, ಮೂರು ಸಂಘಟನೆಗಳನ್ನು ಸಿಂಗರೂ ಆತನ ಏಜಂಟುಗಳೂ ನಡೆಸಿದರು. **ಮೊದಲನೆಯದು:** ಸಿಂಗರ ಮಗ, ಆರು ವರ್ಷದ ನಂದಮುಕುಂದ ಒಂದು ದಿನ ಶಾಲೆಯಿಂದ ಬರುವಾಗ, ನೇರವಾಗಿ ಮನೆಗೆ ಬರದೆ, ಗೊತ್ತಾದ ಗುಪ್ತಸ್ಥಾನದಲ್ಲಿ ಅಡಗಿಕೊಂಡಿದ್ದು. . ಪೋಲೀಸರಿಗೆ ದೂರು,

ಪತ್ರಿಕಾ ಪ್ರಚಾರ, ಹಾಹಾಕಾರ, ಊರೂರಿಗೆಲ್ಲ ತಂತಿ, ಫೋನು, ತಂದೆ ತಾಯಂದಿರ ತಾಪತ್ರಯವನ್ನು ಕುರಿತ ಲೇಖನ, ಅವರ ಫೋಟೊ, ಅದರಮೇಲೆ ಸಾಹಿತಿಗಳಿಂದ ಕವನ, ಇವು ಸಿಂಗರನ್ನು ಎಲ್ಲರಿಗೂ ಪರಿಚಯಮಾಡಿಕೊಟ್ಟಿತು. ಒಂದುವಾರ ವಾದನಂತರ, ಹುಡುಗನನ್ನು ಯಾರೋ ಸೇಲಂರಸ್ತೆಯಲ್ಲಿ ಕಂಡು ಮನೆಗೆ ಕರೆದು ತಂದದ್ದು, ಅದೊಂದು ಕೋಲಾಹಲ. ಪುನಃ ಸ್ವೀಕಾರೋತ್ಸವ, ವಿಶೇಷ ಸಂಚಿಕೆಗಳ ಪ್ರಕಟಣೆ, ಸೀ ತಿಂಡಿ ಹಂಚಿಕೆ, ಇತ್ಯಾದಿ ಸ್ಟಂಟುಗಳು ಜರುಗಿದುವು.

ಎರಡನೆಯದು : ಸಿಂಗರ ಮಗಳ ಅಪಹರಣ. ಇದೂ, ಹಿಂದಿನದಷ್ಟೇ ಕೃತಕ; ಆದರೆ, ಅದಕ್ಕಿಂತ ರೋಮಾಂಚಕಾರಕ ಇದಕ್ಕೆ ಪ್ರಚಾರ ಇನ್ನೂ ಹೆಚ್ಚು; ಆಕೆ ಸುರಕ್ಷಿತವಾಗಿ ಹಿಂತಿರುಗಿದಾಗ, ಇನ್ನೂ ಹೆಚ್ಚಿನ ವೈಭವ, ಊರಲ್ಲೆಲ್ಲ ಅಭಿನಂದನಾ ಸಭೆಗಳು.

ಎರಡನೆಯ ಸ್ಟಂಟಿನ ನಂತರ, ಸಿಂಗ್ ದಂಪತಿಗಳನ್ನು ಅರಿಯದವರೇ ಇಲ್ಲವೆಂದಾಯಿತು. ಹೆಣ್ಣು ಹೆತ್ತವರೆಲ್ಲರೂ ಅವರೊಂದಿಗೆ ಸಹ ತಪಿಸಿದರು. ದಿನವೂ ಅವರ ಮನೆಮುಂದೆ ನೂರಾರು ಕಾರುಗಳು ಹಾದುಹೋದವು. ದಿನಕ್ಕೆರಡು ಮೂರರಂತೆ ಅವರಿಗೆ ಆಹ್ವಾನಗಳೂ ಬಂದುವು. ಸಮಾಜದಲ್ಲಿ ಅವರು ಗಣ್ಯವ್ಯಕ್ತಿಗಳಾದರು.

ಮೂರನೆಯ ಸ್ಟಂಟು, ಸಿಂಗರ ವ್ಯಾಧಿ. ಅದೊಂದು ನವನವೀನ ವ್ಯಾಧಿಯಂತೆ. ಇದುವರೆಗೆ ಜಗತ್ತಿನಲ್ಲಿ ಅದು ಕೆಲವೇ ಕೆಲವು ಚಕ್ರವರ್ತಿಗಳಿಗೆ ಮಾತ್ರ ಬಂದಿದೆಯಂತೆ–ನಮ್ಮೂರು ಡಾಕ್ಟರುಗಳಿಗೆ ಅದರ ಸುಳಿವೇ ತಿಳಿಯದಂತೆ. ನ್ಯೂ ಮೋನಿಯ ತರಹ, ಆದರೆ, ಅಷ್ಟು ನ್ಯೂ ಅಲ್ಲ; ಹಿಪ್ ತೀರಿಯ ತರಹ, ಆದರೆ, ಕೊಂಚಮೇಲು. ಇದರಿಂದಾಗಿ, ಸಿಂಗ್‌ರ ಖ್ಯಾತಿ ಎಲ್ಲೆಲ್ಲೂ ಹಬ್ಬಿತು. ಅವರನ್ನು ನೋಡಿ, ಅಂಥ ಅಸಮಾನ್ಯರನ್ನು ಕಂಡೆವು, ಎಂಬ ಕೀರ್ತಿಗಳಿಸಲು ಜನ ತಂಡೋಪತಂಡ ಅವರ ಬಂಗ್ಲೆಗೆ ನುಗ್ಗಿದರು. ತಮ್ಮ ವ್ಯಾಧಿಯನ್ನು ಕುರಿತು ಭಾಷಣ ಮಾಡುವಂತೆ ಅವರನ್ನು ಅನೇಕರು ಕರೆದರು. ಹೂವಿನ ಹಾರ ಹಾಕಿದರು. ಅವರಿಗೋಸ್ಕರ ಟೀ ಪಾರ್ಟಿಗಳನ್ನೂ ಭೋಜನ ಕೂಟಗಳನ್ನೂ ಏರ್ಪಡಿಸಿದರು.

ಮೊನ್ನೆ, ಅವರ ಪಬ್ಲಿಸಿಟಿ ಏಜಂಟರ ಸಲಹೆಯ್ನಂತೆ, ಸಿಂಗ್‌ರು ತಮ್ಮ ವ್ಯಾಧಿಯಿಂದ ನಿವೃತ್ತರಾದರೆಂದು ಪ್ರಕಟಿಸಲಾಯಿತು. ನಾಳೆ ಅವರಿಗೆ ನಮ್ಮೂರಿನವರೆಲ್ಲ ಸೇರಿ ಒಂದು ಮಾನಪತ್ರ ಸಮರ್ಪಣೆ ಇಟ್ಟುಕೊಂಡಿದಾರೆ.

ಆದರೆ, ಸಿಂಗ್‌ರು ಹೇಳುತ್ತಾರೆ, ಅದನ್ನು ನಿಜವಾಗಿಯೂ ಅರ್ಪಿಸಬೇಕಾದ್ದು, ಆ ಪ್ರಚಾರ ನಿಪುಣನಿಗೆ, ಎಂದು.

—ಶಿರಾಳ್‌ಕರ್.

——— o ———

ಶಾಸ್ತ್ರಿಗಳ ಮಗ

ಶಾಸ್ತ್ರಿಗಳೇನೋ ತಮ್ಮ ಕರ್ತವ್ಯವನ್ನು ಚಾಚೂ ತಪ್ಪದೆ ನೆರವೇರಿಸಿದರು. ಗೋತ್ರೋದ್ಧಾರಕನಿಗೆ ಯಥೋಕ್ತ, ನಾಮಕರಣ ಮುಂತಾದ ಸಂಸ್ಕಾರಗಳನ್ನೆಲ್ಲ ಎಸಗಿದರು. ತಾವು ಶಿವಪೂಜೆ ಮಾಡುವಾಗ, ಮಡಿಲಲ್ಲೇ ಕೂರಿಸಿಕೊಂಡು, ಆ ಎರಡು ಪುಟ್ಟಕೈಗಳನ್ನೂ ತಮ್ಮ ಕೈಯಲ್ಲಿ ಹಿಡಿದು, ತಾಳ ಹಾಕಿದರು. ಅಮರ ಗಟ್ಟಿ ಮಾಡಿಸಿದರು, ಶಿವಕಥೆ ಕೀರ್ತನೆ ಜಾತ್ರೆ ತೇರು ತೀರ್ಥಯಾತ್ರೆ ಇತ್ಯಾದಿಗಳಿಗೆಲ್ಲ ಮಗನನ್ನೂ ಕರೆದೊಯ್ದರು. ಬಿಲ್ಪತ್ರೆಗಿಡಕ್ಕೆ ಅವನಿಂದ ದಿನವೂ ನೀರೆರೆಸಿದರು.

ಶಾಲೆಗೆ ಕಳುಹಿಸಿದರು. ಅಲ್ಲಿ ಅವನು ಕಲಿತ ಪೋಲೀಮಾತುಗಳನ್ನು ಕೇಳಿ ಅಸಹ್ಯಪಟ್ಟು, ಹುಡುಗನನ್ನು ಹೊಡೆದು, ಬುದ್ಧಿ ಕಲಿಸಿದರು. ಮೇಷ್ಟರ ಮೇಲೆ, ಉನ್ನತ ಅಧಿಕಾರಿಗಳಿಗೆ ಮೂಗರ್ಜಿಗಳನ್ನು ಬರೆದು, ಟಪಾಲ್ ಚೀಟಿ ಪೂರ್ತ ಅಂಟಿಸಿ, ಡಬ್ಬದೊಳಕ್ಕೆ ಹಾಕಿದರು. ಹೋಟಲುಗಳೊಂದರಲ್ಲೂ ಅವನಿಗೆ ಸಾಲ ದೊರೆಯದಂತೆ ಮಾಡಿದರು. ಸಿನಿಮ ಮಂದಿರದ ಹತ್ತಿರದಿಂದ ಬೇರೆ ದೂರದ ಮನೆಗೆ ಬಾಡಿಗೆ ಹೆಚ್ಚು ತೆತ್ತು ಸಂಸಾರ ಬದಲಾಯಿಸಿದರು.

ಮನೆ ತುಂಬ ದೇವರ ಪಟಗಳನ್ನು ನೇತಾಡಿಸಿದರು. ಪೇಪರುಗಳನ್ನು ತರಿಸುತ್ತಿದ್ದರೂ, ತಮ್ಮ ಮಗನಕೈಗೆ ಅವು ಸಿಕ್ಕುವ ಮೊದಲೇ ಅವುಗಳಲ್ಲಿನ ಜಲಂದರ್ ಅಮೃತ್ಸರ್ ಜಾಹಿರಾತುಗಳನ್ನೆಲ್ಲ ಹರಿದರು; ಸಿನಿಮ ತಾರೆಯರ ಚಿತ್ರಕ್ಕೆಲ್ಲ ಮೀಸೆ ಬಳಿದು ತಾವೇ ಅಂದಗೆಡಿಸಿದರು.

ಶಾಲಾ ಲೈಬ್ರರಿಯಿಂದ ತಮ್ಮ ಹುಡುಗ ತಂದ ಕನ್ನಡ ಕಾದಂಬರಿಗಳನ್ನೆಲ್ಲ ತಾವೇ ಕದ್ದು ಓದಿ, ನಂತರ, ಅವನಿಗೆ ಗೊತ್ತಾಗದ ಹಾಗೆ, ಅವನ ಮೇಜಿನ ಮೇಲಿರಿಸಿದರು. ಹುಡುಗ ಬರೆದ ಕವನಗಳನ್ನೆಲ್ಲ ಅವನು ಮಲಗಿದ ಮೇಲೆ ತಾವು ಓದಿ, ಅರ್ಥ ತಿಳಿಯದೆ, ಪೇಚಾಡಿದರು. ಅವುಗಳನ್ನು ಗುಟ್ಟಾಗಿ ಪ್ರತಿಮಾಡಿ, ತಮ್ಮ ಗೆಳೆಯರಿಗೆ ತೋರಿಸಿ, ಅರ್ಥ ತಿಳಿದಾಗ, ತಲೆ ತಗ್ಗಿಸಿದರು.

ಎಸ್ಸೆಸ್ಸೆಲ್ಸಿಯಲ್ಲಿ ಹುಡುಗ ಪಾಸಾಗುವಂತೆ, ನೂರಾರು ರೂಪಾಯಿ ಖರ್ಚು ಮಾಡಿದರು; ಹತ್ತಾರು ಜನರ ಕಾಲು ಕಟ್ಟಿಕೊಂಡರು. ವರ್ಷಕ್ಕೆರಡು ಬಾರಿ,

ಹೇಗೆ ಒದ್ದಾಡಿದರೂ, ಮಗ ಮುಂದುವರಿಯಲಿಲ್ಲ. ಅವನು ಓದಿದ ಕಾದಂಬರಿಗಳೇ ಅವನ ಗಮನವನ್ನು ಬೇರೆಕಡೆ ಸೆಳೆಯಿತು, ಎಂಬುದು ಅವರ ಊಹೆ.

ಹಾಳು, ಅಂಥವುಗಳನ್ನು ಲೈಬ್ರರಿಯಿಂದ ಬಿಸಾಕಿ ಎಂದು ಅವರು ಅಂಗಲಾಚಿದರು. ಅರಣ್ಯರೋದನ ಮಾಡಿದರು. ನಪಾಸಾದ ತಮ್ಮ ಹುಡುಗ ತನ್ನ ಸ್ವಹಸ್ತದಿಂದಲೇ ಅಂಥದ್ದೇ ಒಂದು ಕಾದಂಬರಿ ಬರೆಯುತ್ತಿದಾನೆ, ಎಂದು ತಿಳಿದಾಗ, ಶಾಸ್ತ್ರಿಗಳು, ಪ್ರಾಯಶ್ಚಿತ್ತರೂಪವಾಗಿ ಕಾಶಿಗೆ ಸ್ಪೆಷಲ್ ರೈಲಲ್ಲಿ ಯಾತ್ರೆ ಹೋದರು.

ಅಲ್ಲಿಂದ, ಕಳೆದ ತಿಂಗಳು, ಅವರು ಹಿಂತಿರುಗಿದರು. ರೈಲು ಸ್ಟೇಷನ್ ತಲಪಿದಾಗ, ಶಾಸ್ತ್ರಿಗಳನ್ನು ಎದುರುಗೊಳ್ಳಲು ಒಂದು ತಂಡವೇ ನಿಂತಿತ್ತು, ಹೂವಿನ ಹಾರ ಸಹಿತ.

ಆ ತಂಡದ ತುಂಬ, "ಸುಪ್ರಸಿದ್ಧ ಸಾಹಿತಿ,"ಗಳೇ. ಅವರು ಶಾಸ್ತ್ರಿಗಳನ್ನೇ ಹುಡುಕುತ್ತಿದ್ದರು. ಕಿಟಕಿಯೊಳಗಿಂದ ಅವರ ತಲೆ ಕಾಣಿಸುತ್ತಲೂ, ಅವರೆಲ್ಲರೂ, ಕೈ ಚಪ್ಪಾಳೆ ತಟ್ಟಿದರು. ಇಳಿದಕೂಡಲೇ, ಹಾರ ತುರಾಯಿ ಸಮರ್ಪಣೆಯಾಯಿತು.

ನಿಲ್ದಾಣದಲ್ಲಿ, ಶಾಸ್ತ್ರಿಗಳ ಮಗನೂ ಇದ್ದ. ಅವನ ಕುತ್ತಿಗೆ ಸುತ್ತ, ಅದೇ ತರಹದ ಮತ್ತೊಂದು ಹಾರ.

"ಏನಿದು, ಸಂಭ್ರಮ?" ಎಂದರು ಶಾಸ್ತ್ರಿಗಳು.

ನಿಮ್ಮ ಮಗ, ಆಧುನಿಕ ಕನ್ನಡ ಸಾಹಿತ್ಯದ ಕೃತಿರತ್ನವನ್ನು ಬರೆದಿದಾನೆ; ನಿನ್ನೆ ಪ್ರಕಟವಾಯಿತು. ಇದ್ದದ್ದನ್ನೆಲ್ಲ ಇದ್ದಂತೆಯೇ ಬರೆವ, ಜನರಂಜಕ ವಿಷಯಗಳನ್ನು ಮುಚ್ಚು ಮರೆಯಿಲ್ಲದೆ ಬರೆದು ಕೆರಳಿಸುವ ಬರಹಗಾರ" ಎಂದು ಎಲ್ಲರೂ ಜೈಕಾರ ಮಾಡಿದರು.

ಕನ್ನಡಮ್ಮನಿಗೆ ಇಂತಹ ಬಿಚ್ಚಿದೆಯ ಬೀರನನ್ನು ದಾನಮಾಡಿದ ನೀವೇ ಧನ್ಯರು, ಎಂದರು, ತಂಡದ ನಾಯಕರು.

ಶಾಸ್ತ್ರಿಗಳ ಕಣ್ಣಲ್ಲಿ ನೀರು ಬಂತು. ಜನ ಅದನ್ನ ಸಂತೋಷಾಶ್ರು ಎಂದು ತಿಳಿದು ಕೊಂಡಾಡಿದರು—

—ರೇವಣ್ಣ.

ಭೋಜನ-ಜನ

ಡಿನ್ನರಿಗೆ ಆಹ್ವಾನ ಬಂದರೆ, ನೂರೆಂಟು ದಾಕ್ಷಿಣ್ಯ; ಒಲ್ಲೆ ಎಂದರೆ, ಜಂಬ ಅಂತಾರೆ, ಹೊಟ್ಟೆ ತುಂಬಿದವನು ಅಂತಾರೆ, ನಾಲ್ಕು ಜನವನ್ನು ಕರೆದು ಅನ್ನ ಹಾಕುವ ಬುದ್ಧಿಯೂ ಅದಕ್ಕೆ ಬೇಕಾದ ಶಕ್ತಿಯೂ ತನಗಿಲ್ಲದಿದ್ದರೂ ಬೇರೊಬ್ಬ ಅದೇ ಸಮಾಜ ಸೇವೆಯನ್ನು ಮಾಡುವಾಗ ಅಲ್ಲಿಗೆ ಹೋಗಿ ಅದನ್ನು ನೋಡುವುದಕ್ಕೆ ಕೂಡ ಸಹನೆ ಇಲ್ಲದವನು, ಅಂತಾರೆ, ಜೊತೆಯವರ ಕೂಡ ಕುಳಿತು ಊಟಮಾಡುವ ರಸಿಕ ಅಲ್ಲ, ಅಂತಾರೆ. ಯಾರಿಗೆ ವರ್ಗವಾದ ಪ್ರಯುಕ್ತ ಡಿನ್ನರ್ ಏರ್ಪಾಟಾಗಿದೆಯೋ ಅವರ ಮೇಲೆ ಗೌರವ ಇಲ್ಲ, ಅಂತಾರೆ. ಸರಿ! ಹೋಗಿ, ಎಲೆ ಮುಂದೆ ಕೂತು ಎದ್ದು ಬಂದುಬಿಡೋದೇ ಬುದ್ಧಿವಂತಿಕೆ, ಎಂದುಕೊಂಡೆ.

ನನ್ನನ್ನೂ ಸೇರಿಸಿ ೧೫ ಜನ ಇದ್ದರು. ಒಬ್ಬರೂ ಭೋಜನಶಾಸ್ತ್ರರಲ್ಲ, ಅಂದರೆ, ನಮ್ಮೂರಿನ ಖಾಯಂ ಡಿನ್ನರ್ದಾರರಲ್ಲ, ಯಾರು ಹೊಸದಾಗಿ ಊರಿಗೆ ನೇಮಕವಾಗಲಿ, ಯಾರಿಗೆ ಊರಿಂದ ವರ್ಗವಾಗಲಿ, ಡಿನ್ನರ್ ಎಂಬ ಕೂಟವನ್ನು ಯಾರು ಎಲ್ಲಿ ವ್ಯವಸ್ಥೆ ಮಾಡಲಿ, ಇದೇ ಸೆಟ್‌ನ ಜನರೇ ಆಹ್ವಾನಿತ ಮಹನೀಯರು. ಆದರೆ, ಅವತ್ತು, ಎಲ್ಲ ತೀರ ಹೊಸಬರು.

ಕೂತಿದ್ದಾಯಿತು. ಅನ್ನ ಬಡಿಸಿದಾಗಲೇ, ಪ್ರಾರಂಭ, ಅಡಚಣೆಗಳು. ಒಬ್ಬರು ಗೋಧಿ ಅನ್ನದ ಮೂತ್ರರೋಗಿಗಳು. ಒಂದು ಅಗಳನ್ನೂ ಅವರು ಹಾಕಿಸಿಕೊಳ್ಳಲಿಲ್ಲ. ಹಾಗಲಕಾಯಿ ಗೊಜ್ಜು ಒಬ್ಬರಿಗಾಗದು, ಕುಂಬಳಕಾಯಿ ಮಜ್ಜಿಗೆ ಹುಳಿ ಇಬ್ಬರಿಗೆ ವರ್ಜ್ಯ. ನುಗ್ಗೇಕಾಯಿ ಹುಳಿ ಮೂರು ಜನ ಎಲೆಯ ಮೂಲೆಗೆ ತಳ್ಳಿ ಕೈ ತೊಳೆದುಕೊಂಡರು. ತಮ್ಮ ಅಸಹ್ಯ ಮೂತಿಯನ್ನು ಎಲ್ಲರೆದುರಿಗೂ, ಹಿಡಿದರು.

ಹಲ್ಲು ಕೀಳಿಸಿ, ಒಸಡು ಗಟ್ಟಿಯಾಗಲು ತಿಂಗಳು ನೂಕುತ್ತಿದ್ದ ಒಬ್ಬರು ಉಪ್ಪೇರಿ, ಆಂಬೊಡೆ, ಸಂಡಿಗೆ, ಕೋಸುಂಬರಿ, ಬಾಳೆಕಾಯಿಪಲ್ಯ ಒಂದನ್ನೂ ಮೂಸಿನೋಡಲಿಲ್ಲ. ಹಲ್ಲುಕಿತ್ತಾಗ ತಮಗಾದ ನೋವನ್ನು ಅವರು ಎಲ್ಲರಿಗೂ ಹೇಳಿದರು.

ಅವತ್ತು, ಗುರುವಾರ ಬೇರೆ. ಆದ್ದರಿಂದ, ಗುರುಗಳೊಬ್ಬರನ್ನು ಆಶ್ರಯಿಸಿ ಅವರ ನೆರಳಿನಲ್ಲಿ ಎಡವುತ್ತಿದ್ದ ನಾಲ್ವರು ಫಳಾಸ ಶಾಸ್ತ್ರಕ್ಕಾಗಿ, ಕರಿದ ಪದಾರ್ಥ ಗಳನ್ನು ಮಾತ್ರ ನಂಜಿಕೊಳ್ಳುತ್ತ ಕುಳಿತರು, ತಾವು ಸೇರಬೇಕೆಂದಿರುವ ಸ್ವರ್ಗಕ್ಕೆ ನಮ್ಮನ್ನೂ ಕರೆದರು.

ಡಾಕ್ಟರೊಬ್ಬರು ಪ್ರತಿ ಪದಾರ್ಥದಲ್ಲೂ ವಿಟಮಿನುಗಳನ್ನಾರಿಸುತ್ತಿದ್ದರು. ಡಾಲ್ಡಾದಲ್ಲಿ ಕರಿದರೋ, ಅಂಗಡಿ ತುಪ್ಪದಲ್ಲೋ, ಎಂದು ಅನ್ನದಾತರನ್ನು ಗೋಳು ಹುಯ್ದರು. ಅಂಗಡಿ ತುಪ್ಪದಲ್ಲಿ ಯಾವ ಯಾವ ಪ್ರಾಣಿಗಳ ಕೊಬ್ಬಿರುತ್ತದೆ, ಎಂದು ಸಾರಿದರು.

ಹಲವಾರು ವರ್ಷಗಳ ರೇಷನ್ ತಾಪತ್ರಯವನ್ನು ಒಪ್ಪತ್ತೂಟದಿಂದ ತಟಾಯಿ ಸುತ್ತ ಬಂದಿದ್ದ ಇಬ್ಬರು, ಉದ್ದಕ್ಕೂ ಗೊಣಗುತ್ತ, ಹಾಲು ಹಾಕಪ್ಪ ಒಂದು ಬಟ್ಟಲು, ಅಷ್ಟೇ ಸಾಕು, ರಾತ್ರಿ ಊಟ ಮಾಡಿದರೆ, ಬೆಳಗ್ಗೆ ಮಲಬಂಧ ಖಾತ್ರಿ, ಎಂದು ಇತರರಿಗೆ ಬೋಧಿಸಿ, ಕೂಗಾಡುತ್ತಿದ್ದರು. ಮಲಬಂಧದಿಂದ ಉದ್ಭವಿಸುವ ಖಾಯಿಲೆ ಗಳ ಲಿಸ್ಟನ್ನು ಹೇಳಿದರು.

ಉಪ್ಪನ್ನು ನಮ್ಮ ಜನ ಹೆಚ್ಚು ಬಳಸುತ್ತಿರುವುದು ತಪ್ಪು, ಮೆಣಸಿನ ಪುಡಿ ದಿನಕ್ಕೊಂದು ಚಮಚ ಒಳಕ್ಕೆ ಹೋದರೆ, ಕರುಳನ್ನು ಕತ್ತರಿಸಿ ತೂತು ಮಾಡುತ್ತದೆ, ವನಸ್ಪತಿಯಿಂದ ನಿರ್ವೀರ್ಯ ಮುರ್ವೀತಲಂ, ಎಂದೆಲ್ಲ ಪಂಡಿತರೂ ಮೂಲೆಯಿಂದ ಟೀಕಿಸಿದರು.

ಜನನಾಯಕರೊಬ್ಬರು, ದೇಶದ ಕ್ಷಾಮ ಪರಿಸ್ಥಿತಿಯನ್ನು ಹೃದಯವಿದ್ರಾವಕ ವಾಗಿ ವಿವರಿಸುತ್ತ, ಗಂಜಿಕೇಂದ್ರಕ್ಕೆ ತೆವಳುತ್ತ ಬರುವ ಬಡ ರೈತರ ಗುಳಿಗಣ್ಣು ಗಳನ್ನು ವರ್ಣಿಸುತ್ತ, ಚಿರೋಟಿಯನ್ನು ಪುಡಿಮಾಡಿ ಹಾಲು ಬೆರೆಸಿ, ಸಕ್ಕರೆ ಕಲಸಿದರು.

ಒಟ್ಟಿನಲ್ಲಿ, ಎಲೆ ಮುಂದೆ ಕೂತು ಎದ್ದು ಬರುವುದು, ಎಂಬ ನನ್ನ ಸಂಕಲ್ಪ ವನ್ನು, ಈ ಗೆಳೆಯರ ಟೀಕೆಗಳ ಸಹಾಯದಿಂದ, ನಾನು ಅಕ್ಷರಶಃ ಪಾಲಿಸಿದೆ—

—ಪಾಟಾಳಿ.

ಟೀಕೆ !

"ನನಗೇನೋ ಚೆನ್ನಾಗಿಲ್ಲಪ್ಪ! ಇದೇನು ಮುಖವೋ....ಬಿಳಿಚಿಕೊಂಡು ಹೋಗಿದೆ. ಕಳೆಯೇ ಇಲ್ಲ"

"ಆ ಸೆರಗು ಹೊದ್ದುಕೊಂಡಿರೋ ಲಕ್ಷಣವೇ ಸಾಕು! ಶುದ್ಧ ನಟೀರ ಹುಡುಗಿ ಇದ್ದ ಹಾಗೆ ಇದೆ!"

"ಲೋ ಶೀನ....ಫ್ಯಾಷನ್ ಎಲ್ಲ ಬಂದುಬಿಟ್ಟಿದೆಯಲ್ಲೋ ಇವಳಿಗೆ"

"ನೈಲಾನ್ ಸೀರೆನೋಡೆ!....ಎಷ್ಟು ನಾಜೋಕಾಗಿದೆ....ಚೆನ್ನಾಗಿ ಉಟ್ಟಿದಾಳೆ ....ಅದನ್ನ ಮೆಚ್ಚಲೇಬೇಕು"

"ನಮಗೇನೋ ಚೆನ್ನ ಕಣೆ! ಅಮ್ಮಂಗೆ ಸೆರಗು ಹಾಗೆ ಇದ್ರೆ ಆಗೊಲ್ಲ!"

"ರಾಮು....ನೀನೇ ಹೇಳಪ್ಪ....ಲಕ್ಷಣವಾಗಿ ಕೈತುಂಬ ಬಳೆ ಇರಬೇಕೋ ಬೇಡ್ವೋ"

"ಅದೇನೇ ಜಡೆತುದೀಲಿ, ರಾಜಿ, ಟೇಪೇನೆ?....ಅಯ್ಯೋ!....ಅಯ್ಯೋ!"

"ಅಕ್ಕೈಲಿ ರಿಸ್ಟ್‌ವಾಚ್ ಇದೆ ನೋಡು?"

"ಇಲ್ಲ ಕಾಣೋ....ಪಾಪ! ಇನ್ನೂ ತೆಕ್ಕೊಟ್ಟಿಲ್ಲ ಅಂತ ಕಾಣುತ್ತೆ!"

"ಬಿ. ಎ ಆನರ್ಸ್ ಆದ ಹುಡಿಗೀನೂ ಹೀಗೆ ಕಣ್ಣು ಬಿಡೋಲ್ಲಪ್ಪ....ಅದೇನು ರೆಪ್ಪೆಗಳೋ! ಯಾವಾಗಲೂ ಹೊಡೆಯೋ ಹಾಗೇ ಇವೆ!"

"ನಿಂತಿರೊ ಸ್ಟೈಲ್ ನೋಡೆ!"

ನನಗೇಕೋ ಕಿಡಿಕಿಡಿ ಆಯಿತು. ಟೀಕೆ ಮಾಡೋಕೂ ಒಂದು ಮಿತಿ ಇಲ್ವೆ. ಅಜ್ಜಿ, ಅಮ್ಮ ದೊಡ್ಡವರು. ಒಂದು ಮಾತಾಡ್ತಾರೆ ಬಿಡ್ತಾರೆ. ಅದು ಕೇಳುವುದಕ್ಕೂ ಚನ್ನ. ಅವರು ಆಡಿದರು ಅಂತ ಮನೇಲಿರೋರೆಲ್ಲ—ಅಣ್ಣ, ಅತ್ತಿಗೆ, ಅಕ್ಕ, ತಂಗಿ, ತಮ್ಮ ಎಲ್ರೂ ಟೀಕೆ ಮಾಡೋಕೆ ಶುರುಮಾಡೋದೆ?

"ಇನ್ನ ಏನೇನಿದ್ಯೋ ಎಲ್ಲಾ ಬೊಗಳ್ರಿ ಬೇಗ" ಅಂತ ಒಂದು ಸಲ ರೇಗಿದೆ.

ಈಚಿಕಡೆ ರೂಮಿನಲ್ಲಿ ಕೂತಿದ್ದ ನಮ್ಮ ತಂದೆ ಈ ಕೋಲಾಹಲ ಕೇಳಿ "ಅದ್ಯಾಕೆ ಹಾಗೆ ರೇಗ್ತೀಯೋ....ತೊಗೊಂಡ್ಬಾ, ಇಲ್ಲಿ ಆ 'ದಮಯಂತಿ' ಫೋಟೋನ! ನಾನೂ ಸ್ವಲ್ಪ ನೋಡ್ತೀನಿ." ಅಂದರು.

—ಹಾ. ರಾ.

ಗಾದೆಯ ಗುಟ್ಟು

"ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು"....ಮಲ್ಲಿಗೆ ಹೂವಿನ ಬೆಲೆ ಹೆಚ್ಚಾದದ್ದನ್ನು ಟೀಕಿಸುವ ಗಾದೆ ಇದು. ಯಾವನೋ ಒಬ್ಬ ಕಲೋಪಾಸಕ, ಹಿಟ್ಟನ್ನೂ ಹೂವನ್ನೂ ಬಯಸಿ, ಹೂವನ್ನೂ ಮೊದಲುಕೊಂಡು, ಕೈಲಿದ್ದ ಕಾಸೆಲ್ಲ ಅದಕ್ಕೆ ವೆಚ್ಚವಾಗಲು, ಹೊಟ್ಟೆ ಹಸಿವಿನಿಂದ ನರಳಬೇಕಾಗಿ ಬಂತಂತೆ. ಆದ್ದರಿಂದ, ಹೂವು ಕೊಳ್ಳುವಾಗ, ಹಿಟ್ಟಿನಕಾಸನ್ನು ಭದ್ರವಾಗಿ ಬೇರೊಂದೆಡೆ ಇರಿಸಿಕೊಳ್ಳಬೇಕು, ಎಂಬುದೇ ಈ ಗಾದೆಯಿಂದ ನಾವು ಕಲಿಯಬೇಕಾದ ಪಾಠ.

ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ....ದೃಷ್ಟಿ ಬೀರಿ ಕೆಟ್ಟದ್ದನ್ನುಂಟುಮಾಡುವ ಕಣ್ಣಿಗೆ ಸುಣ್ಣದನೀರಲ್ಲಿ ಅರಶಿನ ಕಲಸಿ ಆರತಿ ಎತ್ತಿ ಅಪಕಾರ ಮಾಡಬೇಕು; ಕಟಾಕ್ಷ ಬೀರಿ ಕಲ್ಯಾಣವನ್ನುಂಟುಮಾಡುವ ಕಣ್ಣಿಗೆ ಬೆಣ್ಣೆಯನ್ನು ನವರಿ ಉಪಚಾರ ಮಾಡಬೇಕು—ಎಂಬುದೇ ಈ ಗಾದೆಯ ತಿರುಳು.

ತಾಯಿ ನೋಡಿ ಮಗಳನ್ನು ತಾ—ಮದುವೆಯಾಗಿ ಸಂಸಾರ ಹೂಡುವಾಗಲೇ, ಹೆಂಡತಿಯ ತಾಯಿಯೂ ನಮ್ಮ ಮನೆಯಲ್ಲಿ ಬಂದು ವಕ್ರಿಸಿಬಿಡುವ ಸಂಭವವಿರುವುದರಿಂದ, ಆಕೆಯ ಗುಣ ಆಕೆಯ ಬಾಯಿ, ಇವುಗಳನ್ನ ಗಮನಕ್ಕೆ ತಂದುಕೊಂಡಲ್ಲದೆ, ಮಗಳನ್ನು ಮದುವೆಯಾಗಲು ಒಪ್ಪಬೇಡವೆಂಬುದೇ ಈ ಗಾದೆಯ ಸೂಚನೆ.

ಸಾವಿರ ಕುದುರೆಯ ಸರ್ದಾರ, ಮನೆ ಹೆಂಡತಿಯ ಕಾಸ್ದಾರ....ಈ ಗಾದೆಯಲ್ಲಿ ಆತ ಯಾರ ಕಾಸ್ದಾರ, ಎಂಬುದನ್ನು ನಾವು ಗಮನಿಸಬೇಕು. ಸೈನ್ಯದ ಯಾವುದೇ ಭಾರಿ ಹುದ್ದೆಯಲ್ಲಿದ್ದರೂ, ಆತ ತನ್ನ ಸಾತಿವ್ರತ್ಯವನ್ನು ಕಾಪಾಡುತ್ತಾ ಇರುವ ತನಕ ವೀರಾಧಿವೀರನಾಗಿಯೂ, ದೃಢಗಾತ್ರನಾಗಿಯೂ, ವಿಶ್ವಾಸ ಯೋಗ್ಯನಾಗಿಯೂ ಇರುತ್ತಾನೆ; ಅದು ಬಿಟ್ಟು, ತಪ್ಪುದಾರಿ ಹಿಡಿದನೆಂದರೆ, ಅವನು ಸಾವಿರ ಕುದುರೆ ಸರ್ದಾರನಾಗಿ ಹೆಚ್ಚುದಿನ ಉಳಿಯಲಾರ, ಉಳಿಸಬಾರದು ಎಂಬುದೇ ಗಾದೆಯ ಅರ್ಥ.

ಮನೆ ಉರಿಯುವಾಗ, ಬಾವಿ ತೋಡಿದರು—ಮಾಡಬೇಕಾದದ್ದೇ ಹೀಗೆ. ನೀರಿನ ಕೊರತೆ ಇರುವುದು ಆಗ ಎಲ್ಲರಿಗೂ ಥಟಕ್ಕನೆ ಭಾಸವಾಗುವುದು, ಹತ್ತಾರು ಜನರ ಉಚಿತ ಸಹಾಯ ದೊರೆಯುವುದು. ಟೆಂಡರ್ ಕರೆಸಿ, ಕಂಟ್ರಾಕ್ಟರನ್ನು ಗೊತ್ತು ಹಚ್ಚಿ ಕಾನೂನುಗಳ ರೀತ್ಯಾ ಭಾವಿ ತೋಡುವುದೆಂದರೆ, ಆಗದಮಾತು. ನಮ್ಮ ಜನರು ತರಾತುರಿಯಲ್ಲಲ್ಲದೆ ಯಾವ ಕೆಲಸವನ್ನೂ ನೆರವೇರಿಸಲಾರರು ಎಂಬುದೇ ಈ ಗಾದೆಯ ಅರ್ಥ.

ಮನೆಗೆ ಮಾರಿ, ಪರರಿಗೆ ಉಪಕಾರಿ—ಇದು ಡಾಕ್ಟರುಗಳನ್ನು ಕುರಿತ ಒಂದು ಗಾದೆ. ಆಧುನಿಕ ಡಾಕ್ಟರುಗಳು ಒಂದೇ ಔಷಧೀ ಪ್ರಯೋಗದಿಂದ, ಎರಡು ಬಗೆಯಾಗಿ ಕಾಣಿಸುವ ಚಮತ್ಕಾರವನ್ನು ಈ ಗಾದೆ ಸ್ಪಷ್ಟ ಪಡಿಸುತ್ತದೆ. ಆಗುವ ಫಲ, ಮನೆಯಲ್ಲೂ ಒಂದೇ, ಹೊರಗೂ ಒಂದೇ—ಮಾರಣ. ಆದರೆ, ಪರರು ಆತನನ್ನು ಉಪಕಾರಿ ಎನ್ನುತ್ತ ಕೊಂಡಾಡುತ್ತಾರೆ; ಮನೆಯಲ್ಲಿ ಮಾರಿ ಎಂಬ ನಿಜ ಸ್ವರೂಪ ಬಯಲಾಗುತ್ತದೆ.

—o—

"ಮೋಜರಾಯ"

ಅಧ್ಯಕ್ಷರಿಗಾ.... ಧಾರ.... ನೀ.... ನೇ.... |
ಭಾಶಣದೊಳೀಟ ತಿನ್ನುವವ ನೀನೇ.... ||
ಸತತ ಕಾಯೋ ಶ್ರೀ ಮೈಕಾಸುರನ ಮಿತ್ರ |
ಬಡಮೇಸ್ತ್ರರ, ರಿಜೀಸ್ಟ್ರರ, ಹೊರೆವಾತಾ.... ||

—ಚುಕ್ಕಿ.

ಭಾಷಣ ವೈಖರಿ

(ನಾಡ ಹಬ್ಬದ ಭಾಷಣಗಳಿಂದ ಆಯ್ದದ್ದು)

ಕನ್ನಡ ಕವಿಗಳು ದೀನರಲ್ಲಿ ಬೆರೆತು ದೀನರಾಗಬೇಕು; ದಲಿತರಲ್ಲಿ ಬೆರೆತು ದಲಿತರಾಗಬೇಕು; ಬಡವರಲ್ಲಿ ಬೆರೆತು ಬಡವರಾಗಬೇಕು....ಕನ್ನಡ ಜನ ಒಂದಾಗಿ ಮುಂದಾಗಿ ಕನ್ನಡದ ಬಾವುಟವನ್ನು ಅಮೆರಿಕನ್ ಕಾರುಗಳಿಗೆ ಸಿಕ್ಕಿಸಿ ಮೆರೆಯಬೇಕು; ಕನ್ನಡನುಡಿ ಮೈಲಿಕಲ್ಲುಗಳಮೇಲೂ ಬೈಸಿಕಲ್ಲುಗಳಮೇಲೂ, ಹಳ್ಳಿಯ ಸುಂಕದ ಕಟ್ಟೆ, ಡಿಲ್ಲಿಯ ಶಂಖಡಕಟ್ಟೆಗಳಲ್ಲೂ ಬೀಬೀಸೀ ಬ್ಲಾಕ್‌ಸೀ ಎಲ್ಲೋಸೀ ಬಿಳೀಸೀ ತರಂಗಗಳಮೇಲೂ ನಲಿದಾಡಬೇಕು. ಕನ್ನಡಕ್ಕೊಬ್ಬನೇ ಕೈಲಾಸಂ ಸಾಲದು; ಕನ್ನಡಕೊಬ್ಬ ಮಿಲ್‌ಟನೂ ಕನ್ನಡಕೊಬ್ಬ ಲೂಗಿಯಾಮನೂ ಅತ್ಯಗತ್ಯ ಬೇಕು; ಕನ್ನಡ ಗುಡಿಯ ಬಾಗಿಲುಗಳನ್ನು ಇನ್ನೂ ಅಗಲವಾಗಿ ತೆರೆಯಬೇಕು; ಎಂಟು ಮೂಲೆಗಳಿಂದ ಬೆಳಕು ಒಡೆಯಬೇಕು. ಈ ತೆರನ ಈ ತರದ ಪ್ರಭಾವದಿಂದಲೇ ನಮ್ಮನಾಡು ಟ್ರೂಮನ್ನರನ್ನೂ ಸ್ಟಾಲಿನ್ನರನ್ನೂ ಜಗ್ಗಿಸಿ ಕುಗ್ಗಿಸುವ ಜಾಣತನ ಕಲಿತೀತು....ಹದಿನೈದು ವರ್ಷಗಳೊಳಗೆ ರಾಷ್ಟ್ರಭಾಷೆಯಾದ ಹಿಂದಿ ನಮ್ಮ ನುಡಿಯನ್ನು ನುಂಗದಿರಲು ನಾವು ಇಂಗ್ಲಿಷನ್ನೇ ಭದ್ರವಾಗಿ ಅವಲಂಬಿಸಬೇಕು; ಇಂಗ್ಲಿಷನ್ನು ನಾವು ಸಡಿಲಬಿಟ್ಟರೆ, ಆ ಜಾಗವನ್ನು ಆ ಕ್ಷಣವೇ ಹಿಂದಿ ಬಂದು ಆಕ್ರಮಿಸಿಕೊಂಡುಬಿಡುತ್ತದೆ....ಕನ್ನಡ ಚಿತ್ರಗಳನ್ನು ನಮ್ಮ ಸಿನಿಮ ಕಂಪನಿಗಳು ಈಗಿನ ಅತ್ಯುತ್ತಮ ಕಥಾ ಸಾಹಿತ್ಯಕಾರರ ಸಹಾಯದಿಂದ ತಯಾರಿಸಿದರೆ, ಅವರಿಗೆ ಹೆಚ್ಚು ಲಾಭ ಬರುವುದರಲ್ಲಿ ಸಂದೇಹವಿಲ್ಲ. ಅಮೇರಿಕದ ಹಾಲಿವುಡ್ಡಿನ ಹಲವು ಅತೀ ಚಿತ್ರಗಳಿಗಿಂತ, ಹೆಚ್ಚು ಜನರನ್ನು ಆಕರ್ಷಿಸಬಲ್ಲ ಕಥಾ ಸನ್ನಿವೇಶಗಳನ್ನು ರಚಿಸಿ ಕೊಡಬಲ್ಲ ಸಾಹಿತಿಗಳು ನಮ್ಮಲ್ಲಿ, ನಮ್ಮ ಪುಣ್ಯದಿಂದ, ಈಚೆಗೆ ತಲೆದೋರಿದ್ದಾರೆ.... ಕನ್ನಡದ ಮೇಲಿನ ಮಮತೆಯಿಂದ ನಾವು ಕನ್ನಡ ಚಿತ್ರಗಳನ್ನು ಪ್ರೋತ್ಸಾಹಿಸಬೇಕು ....ಕನ್ನಡ ಚಿತ್ರದಲ್ಲಿ ಬರುವ ಹಿಂದಿ ಅನುಕರಣಗಳನ್ನು, ಹಿಂದೀ ಚಿತ್ರಗಳು ಪುನರನುಕರಣಮಾಡುವಷ್ಟು ನಾವು ಮುಂಬರಿಯಬೇಕು....ಪ್ರಜಾ ಪ್ರಭುತ್ವಯುಗಕ್ಕೆ ತಕ್ಕಂತೆ ಪರಸ್ಪರ ಟೀಕೆ ಟಿಪ್ಪಣಿಗಳಿಗಾಗಿ, ನಮಗೊಂದು ಹೊಸ ಅರ್ಥಕೋಶ ಅಗತ್ಯ ಬೇಕಾಗಿದೆ....ಇತ್ಯಾದಿ.

—— o ——

ದಫೇದಾರ್ ದೇರಣ್ಣೋರು

ಫಕೋಡದಯ್ಯಾ—

"ಲೋ! ಫಕೀರ—ಮುದ್ದಯ್ಯ—ಲಿಂಗಪ್ಪ ನೈಟ್‌ಬೀಟ್ ನನ್ಮಕ್ಕಳೇನೋ ನೀವು.... ಇವತ್ತು ರಾತ್ರಿ ಇನಿಸ್ಪೆರ್ಕ್ಟರ್ಗೆ ಬರ್‍ತಿನಿ—ಯಾಓನಾನ ಮನಗಿರೋದು ಕಾಣ ಬೇಕು—ಮೇಲಕ್ಕೆ ರಿಪೋರ್ಟ ಕಳಸಿಬಿಡ್ತೀನಿ—ಉಶಾರ್.... ಉಶಾರ್...." ಎಂದು ಆರ್ಭಟಿಸಿದರು ಶ್ರೀಮಾನ್ ದಫೆದಾರ್ ದೇರಣ್ಣೋರು—ಉರುಫ್ ಪಕೋಡದಯ್ಯಾ. ನಿಜಕ್ಕೂ ಅವರ ಈ ತುಂಬಿದ ಸರ್ವೀಸಿನಲ್ಲಿ ಬಂದು ಹೋದ ಪೋಲಿಸು ಬಳಗದಲ್ಲಿ ಪಕೋಡದಯ್ಯ ಎಂದರೇ ಬೇಗ ಗುರ್ತು ಹತ್ತುತಿತ್ತು. ಅಷ್ಟೇಕೆ ಮೊನ್ನೆ ಅವರ ಮೆಹನತ್ತಿನಿಂದ ಸಿಕ್ಕಿ ಮಾಮೂಲಿಯ ಮನೆಯಲ್ಲಿ ಹಳೇ ಬೆಲ್ಲದಿಂದ ಇಳಿಸಿದ ಮಹಾ ಪಾನಕ (ಇದಕ್ಕೆ ಭೂಲೋಕ ಅಮೃತವೆಂದೂ ಹೆಸರುಂಟು)ದ ಕೇಸಿನಲ್ಲಿ ದೊರೆತ ಶಭಾಶ್‌ಗಿರಿ ಅವರಿಗೆ ಮುಟ್ಟದೆ ಬೇರೊಬ್ಬ ದೇರಣ್ಣನಿಗೆ ತಲುಪಿತ್ತು. ಉರುಫ್ ಪಕೋಡದಯ್ಯನವರು ಎಂದು ವಿಳಾಸ ತಿದ್ದಿದಮೇಲೆ ಅವರ ಕೈಸೇರಿತು. ಪಕೋಡದಯ್ಯನವರೆಂದರೆ ಅವರಿಗೂ ಕೋಪವಿಲ್ಲ—ಏಕೆಂದರೆ ಪಕೋಡ ಅವರಿಗೆ ಬಹು ಪ್ರಿಯವಾದ ತಿಂಡಿ. ಇದರ ವಿಷಯವಾಗಿ ಒಂದು ಜನಜ್ಞನಿತವಾದ ಕಥೆಯುಂಟು-ಕಥೆ ಇದು ಎಂದು ದ|| ದೇರಣ್ಣನವರ ವಾದ ಕಥೆಯಲ್ಲ ನಿಜಕ್ಕೂ ನಡೆದ ವಿಷಯ ವಿದು ಎಂದು ಕಾ|| ಫಕೀರಪ್ಪನವರ ವಾದ. ಅವತ್ತು ಸಂಜೆ ಜಟಕಾಸ್ಟ್ಯಾಂಡಿನ ಹತ್ತಿರ 'ನಿಂತಿದ್ದಾಗ ಕಾ|| ಫಕೀರಪ್ಪನವರು ಬಂದರು. ಆ ಮಾತು ಈ ವಿಷಯ ದಿಂದ ಶ್ರೀ ದ|| ದೇರಣ್ಣನವರ ಸಮಾಚಾರಕ್ಕೆ ಹೊರಳಿತು. ಅವರ ಸುದ್ದಿ ಬರಲಿಕ್ಕೆ ಕಾರಣ ಕಾ|| ಫಕೀರಪ್ಪನವರ ನೈಟ್ ಬೀಟೇ ಕಾರಣ. ಅವರೆಂದರು. "....... ನೈಟ್ ಬೀಟ್ ಇನ್ನೊಂದು ವಾರ ಪೂರೈಸಿದರೆ ಆಯ್ತು ಸಧ್ಯ-ದಿನಾ ಒಂದೂವರಾಣೆ ಮಿಗತ್ತೆ...." "ಅರೆ! ನಿನಗೆ ಹೇಗೆ ಮಿಗತ್ತೆ...." ಎಂದಾಗ ಅವರು "........ ನಿಜ ಹೇಳ್ತಿನಿ ಕೇಳಿ.... ರಾತ್ರಿ ಬೀಟಿಗೆ ಹೋಗೋಕೆ ಮುಂಚೆ—ದೇರಣ್ಣೋರ ಮನೆಗೆ ಹೋಗಿ—ಮೂಲೆ ಹೋಟ್ಲು ಈರುಳ್ಳಿ ಪಕೋಡ ಕೊಟ್ಟು ಹೋದರೇ.... ರಾತ್ರಿ ಸುಖ ವಾಗಿ ಮನಿಕ್ಕೊ ಬಹುದು. ಇಲ್ದಿನಾ ಇದ್ರೆ.... ಬಂತು ಪ್ರಾಣಕ್ಕೆ.... ಮರುದಿನ

ರಿಪೋರ್ಟ್‌ರ್‌....” ಎಂದ. ಆಗ ತಿಳಿಯಿತು ಯಾತಕ್ಕೆ ಒಂದೂವರಾಣೆ ಈತನಿಗೆ ಖರ್ಚಾಗಂತ. “........ನಿಜವಾಗ್ಲೂ ಪಕೋಡಾಂದ್ರೆ ಅಂಥಾ ಆಸೇನ ಅವರಿಗೆ....” ಎಂದು ಪಕೀರಪ್ಪನ್ನ ಪೀಡಿಸಿದಾಗ ಬಾಯಿಬಿಟ್ಟ ಆತ. “....ಪ್ರೀತಿ!! ಆ ಪ್ರೀತಿನೇ ಅವರನ್ನ ಇನ್ನೂ ಜಮೇದಾರಾಗೋದಕ್ಕೆ ಬಿಡ್ಲಿಲ್ಲ...ಸಬ್ಬಿನಿಸ್ಪೆಕ್ಟ್ರು ಚಾನ್ಸು ಇಲ್ಲ.... ಮೂರು ವರ್ಷದ ಕೆಳಗಿನ ಮಾತು....ರಾಮದುರ್ಗ—ಕರಡೀಹಳ್ಳಿ—ಸುಂಕದ ಕೆರೆ ಅಮರಾವತಿ—ನಾಗನಕೆರೆ—ನಂದಿಗುಡಿ—ಅಂಬಾವರ—ಕಾಗೇಹಳ್ಳಿ....ಈ ಗ್ರಾಮ ಗಳನ್ನ ಕಳ್ಳರ ಗುರು ಖದೀಮರ ಅಪ್ಪ....ಕನ್ನೇಶ್ವರಿ ಭೀಮ....ಸೂರೇ ಹೊಡದು ನಡುಗಿಸಿದ್ದು ಗೊತ್ತಾ!!” ಕನ್ನೇಶ್ವರಿ ಭೀಮ ಎಂದೊಡನೆ....ಎದೆ ಗುಂಡಿಗೆ ಒಡದೇ ಹೋಯ್ತು. ಅವನ ವಿಷಯ ಕೇಳಿಬಲ್ಲೆ. ಅವನ ಹೆಸರು ಇಡೀ ಊರನ್ನೇ ನಡು ಗಿಸುತ್ತಿತ್ತು—ಎಂಥಾ ಆಫೀಸರ ಕೈಗೂ ಅವ ಸಿಕ್ಕಿಬಿದ್ದಿರಲಿಲ್ಲ. ಅಂಥವನ ಖದೀಮ ತೆಗೂ. ದ|| ದೇರಣ್ಣನವರ ಉಪನಾಮ ಧೇಯಕ್ಕೂ ನಿಕಟ ಸಂಬಂಧವಿದ್ದಮೇಲೆ ಅದರ ಕಥೆ ಕೇಳಲು ಬಹು ಚೆನ್ನ ಅದರಲ್ಲೂ ಮಾತಿನಲ್ಲಿ ಮುತ್ತು ಸುರಿಸಬಲ್ಲ ಶ್ರೀ ಕಾ|| ಫಕೀರಪ್ಪನವರ ಬಾಯಲ್ಲಿ ಕೇಳಲು ಬಹು ಸೊಗಸು. “ಶ್ರೀ ದ|| ದೇರಣ್ಣೋರ ಪಕೋಡ ಪ್ರಿಯತೆಗೂ....ಈ ಕನ್ನೇಶ್ವರಿ ಭೀಮನಿಗೂ ಸಂಬಂಧವಿದೆಯೆ?....” ಎಂದು ಕೆಣಕಿದೆ. “....ಸಂಬಂಧ! ಆ ಮಹಾರಾಯನೇ ಇವರ ಈ ಬಿರುದಿಗೆ ಕಾರಣ....ಕನ್ನೆಶ್ವರಿ ಬಲೇನನ್ಮಗ ಅವನು—ಪೋಲಿಸ್‌ನವರಿಗೆ ಆಟ ಆಡ್ಸೋದೂಂದ್ರೆ ಅವನಿಗೆ ಕಳ್ಳತನ ಮಾಡೋಕಿಂತ ಜಾಸ್ತಿ ಖುಷಿ. ದೇರಣ್ಣೋರ ಕೆಟ್ಟ ಅದೃ ಷ್ಟಾನೋ—ಏನೋ—ಮಟ ಮಟ ಮಧ್ಯಾಹ್ನ ಹನ್ನೆರಡುವರೆ—ತುಂಬನಹಳ್ಳಿ ಕೆರೆ ಏರಿ ಮೇಲೆ ಕುದುರೆ ನಿಲ್ಸಿ ನೀರು ಕುಡಿತಾಅನ್ನೆ ಕನ್ನೇಶ್ವರಿ ಭೀಮ....ಇಂಥಾ ಚಾನ್ಸು ಸಿಗೋದುಂಟಾ-ನಾನು-ತಿಪ್ಪೆರುದ್ರ-ಕುಂಸಿಕರಿಯ-ದೇರಣ್ಣೋರು ಹಂಗೇ ಹರಟೆ ಹೊಡಿತಾ ಆ ಕಡೇನೇ ಬರ್ತಾ ಇದ್ರು ಆಗ ಯಾವ ಕಾಲ ಗೊತ್ತಾ—ಸರ್ಕಾರ ದೋರು ಸಾರಿದ್ರು—ಬದುಕಾನಾ ಆಗ್ಲಿ ಸತ್ತಾಗಾನ ಆಗ್ಲಿ ಕನ್ನೆಶ್ವರಿ ಭೀಮನ್ನ ಹಿಡ್ಕೊಂಡು ಬಂದ್ರೆ ಐದು ಸಾವಿರ ಇನಾಂ ಅಂತ ಡಂಗುರ ಹೊಡಸಿದ್ರು. ದ|| ದೇರಣ್ಣೋರು. “....ಫಕೀರ ಪಕಡ್ರೆ ಕನ್ನೇಶ್ವರಿಕು....” ಎಂದು ಐದುಸಾವಿರ ಜೇಬಿಗೆ ಬಿದ್ದಂತೇ ಹೇಳಿದರು. ನನಗೆ ಕೈ ಕಾಲು ತಣ್ಣಗಾಯ್ತು—ಕನ್ನೆಶ್ವರಿನ್ನ ಪಕಡ್ರೆ ಅನ್ನೋದು ಸುಲಭ—ಹಿಡಿಯೋನು ಬೆಂಕಿ ಹಿಡಿಯೋಕೆ ಹೋದಂಗೇ ಹೋಗಬೇಕು.

ನಾವು ಹೆಜ್ಜೆ ಮೇಲೆ ಹೆಜ್ಜೆ ಇಡುತ್ತಾ ಕೆರೆ ದಂಡೆ ಬಳಿ ಬಂದೆವು. ಆತ ನೀರು ಕುಡಿದು ಮೇಲಕ್ಕೆ ಆಗತಾನೆ ಬರ್‍ತಿದ್ದ ಶಾಂತಮೂರ್ತಿ ಕನ್ನೇಶ್ವರಿ—ನಮ್ಮನ್ನ ನೋಡ್ದ—ಆ ಹುರಿ ಮೀಸೆ ತಿರುಗಿಸಿ ಕಿರುನಗೆ ನಕ್ಕ—ಆ ನಗುಗೆ ಕುಂಸಿ ಕರಿಯ ಬೆಬೆಬೆಬೆ ಎಂದು ಗಡಗಡ ನಡುಗಿ ಬೀಳುತ್ತಿದ್ದ ಪೇಟ—ಎಡಗಾಲ ಚಪ್ಪಲೀನು ಬಿಟ್ಟು—ಓಡೇಹೋದ. ಯಾಕೇಂದ್ರೆ ಕನ್ನೇಶ್ವರಿ ಕೈಲಿ ಅವನಾಗಲೆ ಏಟು

ತಿಂದಿದ್ದ ಒಂದು ಸಲ. ಜೋರಾಗಿ ಕೂಗ್ತಿದ್ದೀನಿಂತ ತಿಳಕೊಂಡು ದೇರಣ್ಣ ಗಂಟ್ಲಲ್ಲೇ ಗುಸ ಗುಸ ಅನ್ನುತ್ತ "ಹಿಹಿಡಿರ್‍ರ್ರೋ....ರ್‍ರೋ...." ಎಂದರು—ನಾವೆಲ್ಲಾ ಸೊಳ್ಳೆ ಸಮಾನ ಕನ್ನೆಶ್ವರಿಗೆ ಅವನೆಂದ "ಯಾರ್‍ರೋ ಅವನು" ಎಂದು—ನಾನು "ದಪೆ ದಾರ್‍ರು ದೇರಣ್ಣೋರು...." ಎಂದೆ. ಕನ್ನೆಶ್ವರಿ ಮತ್ತೆ "ಕರಿಯೋ ಆ ನನ್ಮಗನ್ನ...." ಎಂದು ಗುಟುರು ಹಾಕಿದ, ನಾನು ಓಡಿದ್ದು ಕಂಡು ತಿಪ್ಪೆರುದ್ರನೂ ನನ್ನ ಹಿಂದೇ ಓಡಿದ—ಇಬ್ಬರ ಓಟಾನೂ ಕಂಡ ದ|| ದೇರಣ್ಣೋರು ಏನೋ ಅಚಾತುರ್ಯ ನಡಿ ತೆಂದು ಅವರೂ ಕಂಬಿಕಿತ್ತರು. "ನಿಲ್ಲಿ ದೇರಣ್ಣೋರೇ...." ಎಂಬ ನನ್ನ ಕೂಗು ಅವರ ಕಾಲಿಗೆ ಇನ್ನೂ ಬಲಾ ಕೊಟ್ಟಿತು....ಓಡೇ ಓಡಿದರು ಕಾಡು ಮೇಡು ಬಿದ್ದು. ಕನ್ನೆಶ್ವರಿ ಖದೀಮ, ಅವರಿಗೆ ಇಂಥವರನ್ನ ಕಂಡರೆ ಬಲೇ ಮಜ—ಕುದುರೆಗೆ ಕಾಲಿಂದ ಕಚಗುಳಿ ಕೊಟ್ಟ—ನಾಗಾಲೋಟಕ್ಕೆ ತೊಡಗಿತು. ದೇರಣ್ಣೋರು ಮುಂದೆ—ಅವರ ಹಿಂದೆ ನಾನು ನನ್ನ ಹಿಂದೆ ತಿಪ್ಪೇರುದ್ರ—ಅವನ ಹಿಂದೆ ಕುದುರೆ ಏರಿದ ಕನ್ನೆಶ್ವರಿ!!...."

"ಆ ಮೇಲೆ!! ಸಿಕ್ಕಿಬಿದ್ದಿರಾ!" ಚೆನ್ನಾಗೈತೆ ಸ್ವಾಮಿ ನೀವು ಕೇಳೋದು—ಅವನ ಕೈಗಲ್ದೆ ಮತ್ಯಾರ ಕೈಗೆ ಸಿಕ್ಕಿಬೀಳಬೇಕು....ನಗಬೇಡಿ ಕನ್ನೆಶ್ವರಿ ಸಮಾ ಚಾರಾಂದ್ರೆ ಹಾಗೇ....ನಾವು ಅವನ್ನ ಹಿಡಿಯೋದಕ್ಕಿಂತ ಅವನೇ ನಮ್ಮನ್ನ ಗುಡು ಗಾಡಿಸಿ ಆಟ ಆಡ್ಸೋದೇ ಜಾಸ್ತಿ....ಆಮೇಲೆ ದ|| ದೇರಣ್ಣೋರು ನಿಂತರು.... ನಾವಿಬ್ರೂ ನಿಂತೆವು ...ಸುಸ್ತಾದ್ದರಿಂದ—ಏದುತ್ತಿದ್ದೆವು. ಕನ್ನೆಶ್ವರಿ ದಫೇದಾರ್‍ರೇ ಹಿಡೀರಿ ನನ್ನ....ಎಂದು ಕೈಮಾಡಿದ....ಅದೇನು ಚಮಕ್ ಮೇಲೆ ದೇರಣ್ಣೋರಿಗೆ ದೇವರು ಬುದ್ದಿಕೊಟ್ನೋ 'ಲಪಕ್' ಅಂತ ಅವನ ಕೈಹಿಡಿದು ಎಳೆದು ಬೇಡಿ ಹಾಕೇ ಬಿಟ್ರು—ಒಂದು ಕೈಗೆ....ನನ್ನ ಕಣ್ಣೆ ನಂಬಲಿಲ್ಲ....ತಲೆ ಗಿಮಿ ಗಿಮಿ ಗಿಮಿ ತಿರುಗಿತು.... ದೇರಣ್ಣೋರು ಮೀಸೆ ತಿರುವುತ್ತಿದ್ದರು....ಇನ್ನು ನನ್ನ ಓಡಿಸಿ ಮತ್ತಾರುಮಂದಿನ್ನ ಕರೆ ತಂದು ಕನ್ನೆಶ್ವರೀನ್ನ ಜೈಲಿಗೆ ಎಳೆಯೋದು ೫೦೦೦ ರೂ. ಜೇಬಿಗೆ ಬಿಡೋದು ಇಷ್ಟೆ ಉಳಿದದ್ದು....ಆಗ ಕಿಲಾಡಿ ಕನ್ನೆಶ್ವರಿ ಏನು ಮಾಡಿದ ಗೊತ್ತೆ....ಮೆತ್ತಗೆ ಕುದುರೆ ಜೀನು ಪಕ್ಕಕ್ಕೆ ಕೈ ಹಾಕಿ ಒಂದು ಪೊಟ್ಟಣ ಎಳದ....ಘಮ ಘಮ ಹಸನ್ ಹಸುವಿನ ತುಪ್ಪದಲ್ಲಿ ಕರಿದ ಗೋಡಂಬಿ ಎದ್ದು ಕಾಣುತ್ತಿದ್ದ ಪಕೋಡ ಒಂದು ಸೇರು ಕೂತಿತ್ತು ಆ ಪೊಟ್ಟಣದಲ್ಲಿ. ಜುಳು ಜುಳು ಜುಳು ನಲ್ಲೀಲಿ ಇಳಿದ ಹಾಗೆ ಸುರೀತು ನೀರು ದೇರಣ್ಣೋರ ಬಾಯಿಂದ."

"ಹ್ಹ ಹ್ಹ ಹ್ಹ ಹ್ಹ....ಚೆನ್ನಾಗಿದೆ....ಆಮೇಲೆ" "....ಬೇಡಿ ಇಲ್ಲದ ಕೈಯ್ಯಲ್ಲಿ ಪಕೋಡದ ಪೊಟ್ಟಣ ಹಿಡಿದು ದ|| ದೇರಣ್ಣೋರ ಮೂಗಿನ ಹತ್ತಿರ ಅತ್ತಿಂದ ಇತ್ತ ನವಿ ರಾಗಿ ಆಡಿಸಿದ ಆ ಕನ್ನೆಶ್ವರಿ., ಪುಂಗಿ ನಾದಕ್ಕೆ ಹಾವು ಹೆಡೆ ಆಡಿಸೋ ಹಾಗೆ ಆ ಪೊಟ್ಟಣದ ಗುಂಟಾ ತಲೆ ಆಡಿಸಿದರು ದೇರಣ್ಣೋರು. ಬೇಡಿ ಬಿಚ್ಚಿದರೆ ನೀನೆ ಪೊಟ್ಟ

ಬಿಚ್ಚಬಹುದು" ಎಂದ ಕನ್ನೆಶಿ. ಎಂಥಾ ಪ್ರಸಂಗ....ಒಂದು ಕಡೆ ೫೦೦೦ ರೂಪಾಯಿ ಒಂದು ಕಡೆ ಪಕೋಡದ ಪೊಟ್ಣ....ದೇರಣ್ಣೋರ ತಕ್ಕಡೀಲಿ ಪಕೋಡವೇ ತೂಕವಾಗಿತ್ತು. ಆ ಅರೆಕ್ಷಣದಲ್ಲಿ ಎಡಗೈಯ್ಯಲ್ಲಿ ಪೊಟ್ಣ ಇಸ್ಕೊಂಡು ಬಲಗೈಯ್ಯಲ್ಲಿ ಬೇಡಿ ಬಿಚ್ಚಿಬಿಟ್ಟರು...."

"ಒಂದು ಕೈಗೆ ಬೇಡಿ ಹಾಕಿದ್ದರೇ ಕನ್ನೆಶ್ವರಿಗೆ ಯಾಕೆ ಭಯ?—ಹಾಗೇ ಓಡಿಹೋಗ ಬಹುದಿತ್ತಲ್ಲ?"

"....ಆಗಲೇ ಹೇಳ್ಳಿಲ್ವೆ ನಾನು....ಕನ್ನೆಶ್ವರಿಗೆ ಕಾನಿಸ್ಟೆಬಲ್ ಕೈಲಿ ಕಾದಾಡೋದು ಬೆಕ್ಕಿಗೆ ಇಲಿ ಜೊತೆ ಚೆನ್ನಾಟ ಆಡಿಧಂಗೆ ಅಂತ—ನೀವು ಕೇಳೋ ಪ್ರಶ್ನೆ ಚೆನ್ನಾಗಿದೆ—ಶ್ರೀ ದ|| ದೇರಣ್ಣೋರನ್ನ ಆಡಿಸಲಿಕ್ಕೆ ಅವನು ಹೀಗೆ ಮಾಡಿದ್ದು.... ಆಯ್ತಲ್ಲ—ದೇವ್ರನಂಥ ಪಕೋಡದ ಪೊಟ್ಣ ತೊಗೊಂಡು ತಲೆ ಬಗ್ಗಿಸಿ ತಿನ್ನ ತೊಡಗಿದರೇ ಹೊರ್ತು ನಾವು ಇಬ್ಬರು ಹತ್ತಿರಲೇ ಇದ್ದೀವೀನ್ನೊದು ಕೂಡ ಅವರಿಗೆ ತೋಚಲಿಲ್ಲ....ಅದು ಅವರ ತಪ್ಪಲ್ಲ ಹಸುವಿನ ತುಪ್ಪದಲ್ಲಿ ಕರಿದ ಪಕೋಡದ ತಪ್ಪು. ಅರ್ಧ ತಿಂದು ಅರ್ಧ ಹಾಗೇ ಜೇಬಿಗೆ ಬಿಟ್ಟರು...."

"ಅಲ್ಲಾ....ಮನೆಗೆ ಒಯ್ಯಲಿಕ್ಕೆ—ಇಲ್ದಿದ್ರೆ ಧರ್ಮಪತ್ನಿ—ಸಾವಂತ್ರಮ್ಮನವರು ದವಡೆಗಿಕ್ಕಿಬಿಟ್ಟಾರು...."

"ಸಾವಂತ್ರಮ್ಮ....ದೇರಣ್ಣೋರ ಹೆಂಡ್ತಿನಾ! ಅವರಿಗೆ ಲಗ್ನವಾಗಿದೆಯೆ?...."

"ಚೆನ್ನಾಯ್ತು....ಆ ಮದುವೆ....ಆ ಅದರ ಸಂಸಾರದ ಸೊಗಸಿನ ಕಥೆ....ಅರೆ ಆಗಲೆ ಹೊತ್ತಾಯ್ತು....ಅವರೇ ಬರ್ತಾಇದಾರೆ...." ಎಂದು ಮೀಸೆ ಮೇಲೆ ಕೈಯ್ಯಾಡಿಸುತ್ತಾ ಬಂದ ದೇಸಣ್ಣನವರಿಗೆ ಫಕೀರ ಸೆಟೆದು ನಿಂತು ಸಲಾಂ ಹಾಕಿದ. ಅವರೂ ಸಲಾಂ ಹಾಕಿ ಹೊರಟೇ ಹೋದರು....ಅವರು ಕೊಂಚ ದೂರ ಹೋದಮೇಲೆ ಫಕೀರ...."ಅವರು ಚೋರಿ ಹಿಡಿದ ಕಥೆ, ನಾಳೆ ಮೆಜಿಸ್ಟ್ರೆಕ್ ಹತ್ರ ಬನ್ನಿ ಹೇಳ್ತೀನಿ...." ಎಂದು ಅವರನ್ನೇ ಹಿಂಬಾಲಿಸಿ ಹೊರಟೆ ಹೋದ—ಆ ಕಥೆಗೆ ನಾನು ಚಾತಕ ಹಕ್ಕಿಯಂಥೆ ನಾಳೆ ಮುಂಜಾನೆಗೆ ಕಾದುಕುಳಿತೆ.

—ದಾಶರಥಿ ದೀಕ್ಷಿತ್.

" ಕಳಿಂಗ "

" ಅಣ್ಣಾ, ಅದೇನದು ಪೇಪರು ನೀನ್ ತಂದಿರೋದು ? "

" ಅದೇನೋ " ಕಳಿಂಗ" ಅಂತೆ ಕಣೆ—ವಾರಪತ್ರಿಕೆ—ಈ ಕಾಲಕ್ಕೆ ಸೊಗಸಾದ ಹೆಸರು—ಪೇಪರ್ ಏಜಂಟ್ ವೆಂಕಟಸಾಮಿ ಚೆನ್ನಾಗಿದೆ ಅಂತಂದ. ಇರಲಿ ಅಂದೆ."

" ಅಯ್ಯೋ ಹಾಳು!....ಅದನ್ಯಾಕೆ ತಂದಿದೀಯಾ. ಶುದ್ಧ ತಲೆಹರಟೆ ಪೇಪರದು. ಅದರ ಸಂಪಾದಕನಿಗೆ ಮೆದುಳೇ ಇಲ್ಲ. ಅವನ ತಲಕ್ಕಾಯಿ....ಮನಸ್ಸಿಗೆ ಬಂದಿದ್ದೆಲ್ಲಾ ಬರೀತಾನೆ. ಸಿಕ್ಕಿಸಿಕ್ಕಿದ್ದೆಲ್ಲಾ ತುಂಬ್ಸಿರ್ತಾನೆ ಪೇಪರ್‌ನಲ್ಲಿ. ಜವಾಬ್ದಾರೀನೇ ಇಲ್ಲ. ಶುದ್ಧ ಕಳಿಂಗ ಆತ! "

" ಇದೇನೇ ಶಾರದು! ನಾನು ಈ ಪೇಪರನ್ನ ಇದುವರೆಗೂನೂ ಮನೆಗೆ ತಂದಿದ್ದೇ ಇಲ್ವಲ್ಲ. ನೀನದನ್ನ ಓದದೇನೇ ಯಾರೋ ಹೇಳಿದ್ದನ್ನ ಕೇಳಿ ಉರಿದು ಬೀಳ್ತಾ ಇದೀಯಾ. ಅಂತ ಕಾಣ್ಸುತ್ತೆ."

" ಇಲ್ಲಾಣ್ಣ....ಪಕ್ಕದ್ಮನೆಗೆ ಬರುತ್ತೆ ಆ ಪೇಪರು. ವೆಂಕಟ್ಲಕ್ಷ್ಮಿ ನಂಗೆ ಓದೋದಕ್ಕೆ ಕೊಡ್ತಾ ಇದ್ದಳು."

" ಓ....ಹಾಗೇನು....? ಆದರೆ ನನಗ್ಯಾಕೋ ಪೇಪರು ಚೆನ್ನಾಗಿದೆ ಅನ್ಸುತ್ತೆ.

ನೀನು ಯಾಕೆ ಅದನ್ನ ಅಷ್ಟೊಂದು ತೆಗಳ್ತಿದೀಯಾ ಅಂತ ನಂಗೆ ತಿಳಿಯೋದಿಲ್ಲ. ಇಲ್ಲಿ ನೋಡು ಒಂದು ಲೇಖನ " ವಿದ್ಯಾರ್ಥಿನಿಯರ ಕರ್ತವ್ಯ" ಅಂತ....

" ಎಲ್ಲಿ ನೋಡೋಣ ಇಲ್ಲಿ ಕೊಡು ಪೇಪರು...."

" ಯಾರೋ ಅಪ್ಪ....ಕುಮಾರಿ ಶಾರದಾ ಶಾಸ್ತ್ರಿ ಅಂತೆ....ಲೋಕದಲ್ಲಿರೋ ಹುಡುಗೀರಿಗೆಲ್ಲಾ ಬುದ್ಧಿ ಹೇಳೋದಕ್ಕೆ ಹೊರಟಿದ್ದಾರೆ"....ಲೇ....ಲೇ....ಹಾಗೆ ಕಿತ್ಕೋಬೇಡವೇ ಪೇಪರನ್ನ....ಹರಿದು ಹೋಗುತ್ತೆ ಕಣೆ....ನಾಲ್ಕಾಣೇ ಕೊಟ್ಟಿದೀನಿ."

" ಹೋಗ್ ನೀನು—ನಾನು ಓದಿಬಿಟ್ಟು ಆ ಮೇಲೆ ಕೊಡ್ತೀನಿ"

“ ಅಲ್ವೆ ಈಗ ತಾನೆ ದೂರಿದೆ ಆ ಸಂಪಾದಕನನ್ನ....ಮತ್ತೆ ನೋಡು ಆತುರ ಪಡ್ತಾ ಇದೀಯ ಪೇಪರನ್ನೋದೋದಕ್ಕೆ! ಇದಕ್ಕೇ ಅನ್ನೋದು ಸ್ತ್ರೀ ಬುದ್ಧಿ....”

“ ಹೋಗಣ್ಣಾ ನೀನು”


“ ಹೋಗ್ತೀನಿ ಕಣೆ. ನನ್ನ ಪೇಪರ್ ಕೊಡು ಅಂದ್ನಲ್ಲಾ”

“ ಕೊಡೋಲ್ಲ ಹೋಗು”

“ ಇದೇ ನಂಗಾಗೋದಿಲ್ಲಾ ನೋಡು....ನಿನ್ನ ಲೇಖನ ಅಚ್ಚು ಮಾಡಿದ ಮೇಲೆ ಆ ಸಂಪಾದಕ—ಕಳಿಂಗ ಪೇಪರ್ ಕಳಿಸ್ದೆ ಇರ್ತಾನೆಯೇ....ಲೇ ಪೇಪರ್ ಎತ್ತಿಕೊಂಡು ಓಡ್ಬೇಡ ಕಣೆ ಹಾಗೆ....ನಿನ್ ಲೇಖನ ಗೆಳತೀರಿಗೆಲ್ಲ ಕೊನೆಗೆ ತೋರಿಸ್ಬಹುದು....ಲೇ ಶಾರದು ನಾ ಓದಿಕೊಡ್ತೀನಿ ಕಣೆ....ಥೂ ನನ್ನೇ ಕಳಿಂಗ ಅಂತ ಕರೀತ್ತೀನೇ....ಒಳ್ಳೇ ತಂಗಿ ಕಣೆ ನೀನು.

—ಎ. ಎಸ್. ರಾಮಕೃಷ್ಣ

—o—



ರಾಜಕೀಯ ಶಿಕ್ಷಣ

ನನ್ನ ಮನೆಯ ಆಡಳಿತವನ್ನು ನಾನು ಸ್ವತಂತ್ರ ಭಾರತಕ್ಕೆ ತಕ್ಕಂತೆ ಮಾರ್ಪಡಿಸಿ ಕೊಂಡಿದೇನೆ. ಕನ್ನಡಿಯೊಳಗಿನ ಆನೆಯ ಪ್ರತಿಬಿಂಬದಂತೆ, ನನ್ನ ಮನೆ ಕೂಡ, ಭಾರತ ರಾಜ್ಯಾಂಗದ ಒಂದು ಪುಟ್ಟ ಪ್ರತೀಕ. ಹಾಗಿರುವುದರಿಂದಲೇ ನನ್ನ ಮನೆಗೆ ನಾನು " ಕಿರು ಭಾರತ" ಎಂದು ಹೆಸರಿಟ್ಟಿರುವುದು.

ನನ್ನ ಮನೆಯಲ್ಲೂ ನಾಲ್ಕಾರು ಪಕ್ಷಗಳಿವೆ. ಸನಾತನಿಯಾದ ನನ್ನ ಅಜ್ಜಿ, ಅವಳ ಮಗಳು, ಅಂದ್ರೆ ನನ್ನ ತಾಯಿ, ಇವರದು ಒಂದು ಪಕ್ಷ. ಹಬ್ಬ ಹರಿದಿನ ಪುಣ್ಯ ದಿನ ಪುಣ್ಯ ತೀರ್ಥ ಇವುಗಳನ್ನುಳಿಸಿಕೊಂಡು ಬಂದರೆ, ನಮಗೆಲ್ಲರಿಗೂ ಸದ್ಗತಿ ಸತ್ಸಂತಾನ ಸುಖ ಸಂಪತ್ತು ಅನಾಯಾಸವಾಗಿ ದೊರೆಯುವುದು, ಎಂಬುದು ಅವರ ಪ್ರಣಾಳಿ, ಪ್ರಚಾರ. ನಾನು ನನ್ನ ಹಿರೀ ಮಗ ಅವನ ಹೆಂಡತಿ-ನಮ್ಮದು, ಬೇರೊಂದು ಪಕ್ಷ. ಆಗು ಹೋಗುಗಳನ್ನು ಪರಿಶೀಲಿಸಿ, ಸಾಧ್ಯವಾದಷ್ಟು ಖರ್ಚುವೆಚ್ಚಾದಿಗಳನ್ನು ಪರಿಶೀಲಿಸಿ ಸಮತೂಗಿಸಿ, ಸಂಸಾರ ನಡಸಬೇಕೆಂದು ನಾವು. ನನ್ನ ತಮ್ಮನದು ಸಾಲ ತಂದಾದರೂ ಮನೆಯನ್ನು ಸಂಪೂರ್ಣ ರಿಪೇರಿಮಾಡಿಸಿ ಹೊಸ ನಮೂನೆಯದಾಗಿ ಪರಿವರ್ತಿಸಿ, ಯಾವನಾದರೂ ಒಬ್ಬ ಶ್ರೀಮಂತನಿಗೆ ಬಾಡಿಗೆಗೆ ಕೊಟ್ಟುಬಿಡಬೇಕು ; ಮನೆಯ ಮುಂದಿನ ತುಲಸೀಕಟ್ಟೆಯನ್ನೊಡೆಸಿ, ಅಲ್ಲೊಂದು ಗರಾಜು ಕಟ್ಟಿಸಿ, ಅದನ್ನೂ ಬಾಡಿಗೆಗೋ, ಬೀಡಿ ಅಂಗಡಿಗೋ ಕೊಟ್ಟು, ಚಿಕ್ಕದಾಗಿ ಒಂದು ಔಟ್ ಹೌಸ್ ಮಾಡಿಸಿ ಅದರಲ್ಲಿ ನಾವು ಹಾಯವಾಗಿ ಇದ್ದುಬಿಡಬೇಕು, ಎಂಬುದು ಅವನ ಪಕ್ಷ. ನನ್ನ ಅಳಿಯ ಮಗಳು ಇವರಿಬ್ಬರೂ ಆದಷ್ಟು ಪದಾರ್ಥಗಳನ್ನೂ ಒಡವೆ ವಸ್ತ್ರಗಳನ್ನೂ ಆದಷ್ಟು ಬೇಗ ದೋಚಿ ಹೊರಡಬೇಕೆಂದು ನಂಬುವ ಪಕ್ಷ. ಕಿರಿಯವು ನಾಲ್ಕು ಕೇವಲ ಲೂಟಿ ಧ್ವಂಸ ಅನಾಯಕತ್ವ ಇವುಗಳೇ ಲೋಕದಲ್ಲಿ ನೆಲೆಸಿದ್ದರೆ ತಮಗೆ ಅನುಕೂಲ ಎಂಬ ನೀತಿಯ ಪಾಲಕರು. ಅದರಿಂದಲೇ ತಮ್ಮನ್ನು ಯಾರೂ ಶಿಸ್ತು ಶೀಲ ಓದು ಬರಹ ವಿದ್ಯೆ ವಿನಯ ಎಂದು ಪೀಡಿಸುವುದಿಲ್ಲ, ಎಂದು ಅವರು ಧೈರ್ಯ ಹೊಂದಿದ್ದರು.

ನನ್ನ ಮನೆ ಆಡಳಿತ ಕೇವಲ ಅರಾಜಕ ಎಂಬುದನ್ನ ನಾನು ನಿಮಗೆ ಇನ್ನು ಹೇಳಬೇಕಾಗಿಯೇ ಇಲ್ಲ. ವರಮಾನದ ಅಂದಾಜಿಲ್ಲದೆ, ಖರ್ಚಿನ ಯೋಚನೆಯೇ

ಇಲ್ಲದೆ, ಉಂಡು ತೇಗುವ ಭಂಡರೇ ಹೆಚ್ಚು. ಅಲ್ಲದೆ, ನನ್ನ ಮನೆಯಲ್ಲಿ ನಾನು ಯಾವುದಕ್ಕೂ ಸಮಿತಿಗಳ ಮೂಲಕವೇ ನಿರ್ಧರಕ್ಕೆ ಬರುತ್ತಿದ್ದೆ. "ಮೆನುಸಮಿತಿ" ಯವರು ಬೆಳಗ್ಗಿಂದ ೧೦ ಗಂಟೆವರೆಗೂ ಚರ್ಚೆಮಾಡಿ, ಯಾವ ಇತ್ಯರ್ಥಕ್ಕೂ ಬರದೆ, ಅನ್ನ ಸಾರು ಇಷ್ಟರಲ್ಲೆ ಅಡಿಗೆ ಪರ್ಯವಸಾನ. ಕಾಫಿಯೋ ಟೀಯೋ ಎಂಬ ನಿರ್ಧಾರಮಾಡಬೇಕಾದ ಸಮಿತಿ ಬರೇ ಚರ್ಚೆಯಲ್ಲೇ ಬಟ್ಟಲು ಬಸಿಗಳನ್ನು ಒಡೆದು ಹಾಕುವರು. ವಾಕಿಂಗ್ ಎಲ್ಲಿಗೆ ಹೋಗಬೇಕು, ದಿನವೂ, ಎಂಬುದನ್ನು ನಿಶ್ಚಯಿಸಲು ನೇಮಕವಾಗಿರುವ ಸಮಿತಿಯವರು ಒಬ್ಬೊಬ್ಬರೂ ಒಂದೊಂದು ದಾರಿ ಹಿಡಿಯುವರು. ದೇವರ ಪೂಜೆ ಸಮಿತಿಯವರು ನಮ್ಮ ಮನೆ ದೇವರಿಗೆ ದಿನವೂ ಸಹಸ್ರ ನಾಮವನ್ನೇ ಹೇಳಿ ದೂರುವರು. ಮನೆಯಲ್ಲಿರುವ ಹಲವಾರು ಪಕ್ಷಗಳು ಒಟ್ಟುಗೂಡಿ, ಒಂದು ಸಂಯುಕ್ತ ಪಕ್ಷ ರಚಿಸಿ, ಬಹುಮತವನ್ನು ಗಳಿಸುವತನಕ, ಹೀಗೆಯೇ ನಡೆಯಲಿ. ಗದ್ದಲ ಹೆಚ್ಚಾದರೂ, ಮನೆ ಜನಕ್ಕೆ ಪ್ರಜಾ ಸರ್ಕಾರದ ದೈನಂದಿನ ಪರಿಚಯವಾಗುತ್ತಿದೆಯಲ್ಲಾ, ಎಂದು ನಾನೂ ಸುಮ್ಮನಿದೇನೆ—

—ಕಾಮತ್

—— o ——

— ಚುಟಿಕಗಳು —

೧ ಸಮಸ್ಯೆ

ಮತ್ತೆದಿನವೂ ಗಡ್ಡ ಬೆಳೆವುದು
ಎಷ್ಟು ಕ್ಷೌರುವಮಾಡಿಯೂ!
ಅಂತೆ ನಮ್ಮ ಸಮಸ್ಯೆಬೆಳೆದಿಹೆ
ಯಾರ ರಾಜ್ಯವು ಬಂದರೂ.

೨ ಸಾಹಿತ್ಯ

ಹೊಲಸು ಹುಲುಸಾಗಿರುವ ಪುಸ್ತಕ
ಹತ್ತುಸಾವಿರ ಬರೆದರು.
ಜನರ ಎದುರಿಗೆ ಎಸೆದರು
ಬುದ್ಧಿಯಿಲ್ಲದ ಪೆದ್ದ ಜನಗಳು
ಅವನು ಮೆದ್ದೇ ಮೆದ್ದರು
ಮನದೊಳುಪ್ಪಿನ ಕಾಯಹಾಕುತ
ಚಪ್ಪರಿಸಿ ಸವಿದುಂಡರು

—ದಿಬ್ಬಯ್ಯ.

ರೇಡಿಯೋ ಸುಧಾರಣೆ

ರೇಡಿಯೋ ಕಾರ್ಯಕ್ರಮಗಳಿಂದ ಚಲಚಿತ್ರ ಹಾಡುಗಳನ್ನೂ ಚಲಚಿತ್ರ ವಿಮರ್ಶೆಗಳನ್ನೂ ತೆಗೆದು ಹಾಕಿ, ಆಯಾ ಕಾಲಗಳಲ್ಲಿ ಉತ್ತಮ ಸಂಗೀತಕಾರರಿಂದ ಗಾಯನವನ್ನೇರ್ಪಡಿಸಲು ಡಾ॥ ಕೇಸ್ಕರ್‌ರವರು ತೀರ್ಮಾನಿಸಿರುವರಂತೆ. ಇದೇ ಸಂದರ್ಭದಲ್ಲಿ ನಮ್ಮ ಹಲವು ಅತಿ ಮುಖ್ಯ ಸಲಹೆಗಳನ್ನು ಅವರ ಮುಂದಿಡುತ್ತೇವೆ.

ರೇಡಿಯೋ ಕಾರ್ಯಕ್ರಮಗಳನ್ನು ರೇಡಿಯೋ ಯಂತ್ರಗಳ ಮೂಲಕವೇ ನಾವು ಕೇಳಬೇಕಾಗಿದೆ. ಇದು ಒಂದು ಸುಯೋಗವೇ ಸರಿ. ಏಕೆಂದರೆ, ಆ ಯಂತ್ರಗಳು ಅಷ್ಟು ಅಗ್ಗವಾದವಲ್ಲ; ಎಷ್ಟು ಬೆಲೆ ಕೊಟ್ಟರೂ, ಅವು ಊದ್ದಕ್ಕೂ ಎಲ್ಲ ಋತು ಮಾನಗಳಲ್ಲೂ, ಎಲ್ಲ ವಿದ್ಯುತ್ ವ್ಯವಸ್ಥೆಯಲ್ಲೂ ಸಮರ್ಪಕವಾಗಿ ಧ್ವನಿ ಗ್ರಹಣ ಮಾಡುವುದಿಲ್ಲ. ಆದ್ದರಿಂದ, ೧೦೦ ರೇಡಿಯೋಗಳ ಪೈಕಿ, ೪೦ ರಿಪೇರಿ ಅಂಗಡಿಗಳಲ್ಲಿರುತ್ತವೆ, ಎನ್ನೋಣ. ಇನ್ನು ಉಳಿದ ೬೦ರ ಪೈಕಿ, ೧೦ಕ್ಕೆ ಲೈಸನ್ಸ್ ತೆಗೆಯದೆ ಅವುಗಳ ಮಾಲೀಕರು ಹಚ್ಚಲು ಹೆದರುತ್ತಾರೆ. ಅವೂ ಅಪ್ರಯೋಜಕ. ಉಳಿದ ೫೦ರಲ್ಲಿ, ಏ.ಸಿ, ಡೀಸಿ, ವಿದ್ಯುತ್‌ನ ಹಣ ಪಾವತಿ ಮಾಡದೆ ಪವರ್ ಕತ್ತರಿಸಿರುವ ಕಷ್ಟ, ರೇಡಿಯೋ ರೂಮಿನ ಕೀಲಿ ಕೈ ಕಳೆದುಹೋಗುವಿಕೆ ಇತ್ಯಾದಿ ಕಾರಣಗಳಿಂದ, ೨೦ನ್ನಾದರೂ ಹಚ್ಚಿ ಕೇಳುವ ಸುಯೋಗ ಅವುಗಳನ್ನು ಕೊಂಡಿಟ್ಟರುವರಿಗೆ ಲಭಿಸುವುದಿಲ್ಲ—ಇನ್ನು ಉಳಿದಿರುವುದು, ೩೦. ಅವಲ್ಲಿ ೨೦, ಹೋಟಲುಗಳಲ್ಲಿ ಸ್ಥಾಪನೆಯಾಗಿರುವವು. ಅವರಿಗೇನು? ಗದ್ದಲವಾದರೆ ತೀರಿತು, ಕಪ್ಪು ಬಸಿಗಳ ಖಣ ಖಣ ನಿನದ ಕುಳಿತು ತಿನ್ನುವವರ ರೋದನ ಕ್ರೋಧನ ಚಹವನು ಹೀರುವ ಹ್ರೀಂಕಾರ ಇವೆಲ್ಲವನ್ನೂ ಮುಚ್ಚಿಸುವ ಒಂದು ಗದ್ದಲ—ಅಷ್ಟಿದ್ದರೆ, ಸಾಕು, ಅವರು ರೇಡಿಯೋ ಯಂತ್ರದೊಳಗಿಂದ ಬಯಸುವುದು ಅಷ್ಟನ್ನೇ. ಹಣವನ್ನು ವ್ಯರ್ಥಮಾಡದೆಯೆ ನಾವು ಅದನ್ನು ಒದಗಿಸಬಹುದಾಗಿದೆ.


ಶೇಕಡ ೧೦ ರೇಡಿಯೋ ಮಾಲೀಕರಿಗೆ ಎಂಥ ಕಾರ್ಯಕ್ರಮ ಬೇಕು? ಟೆಸ್ಟ್ ಮ್ಯಾಚುಗಳ, ಅದರಲ್ಲೂ, ಇಂಗ್ಲೆಂಡ್—ಇಂಡಿಯಾ, ಆಸ್ಟ್ರೇಲಿಯಾ—ಆಫ್ರಿಕಾ, ಹೀಗೆ ಪರಸ್ಥಳಗಳಲ್ಲಾಗುವ ಕ್ರೀಡಾವಿನೋದಗಳು, ಮಾಸ್ಕೋ, ವಾಷಿಂಗ್‌ಟನ್ನನ್ನು ಉಗುಳುವ ರೀತಿ, ವಾಷಿಂಗ್‌ಟನ್ ಮಾಸ್ಕೋಗೆ ಬೊಗುಳುವ ರೀತಿ, ಇವನ್ನು ಮಾತ್ರ ಕೇಳಬಯಸುವವರು, ಆ ೧೦ರಲ್ಲಿ, ಇಬ್ಬರು; ಚಿನ್ನದ ಬೆಲೆ ಷೇರುಗಳ ಏರು

ಪೇರು ಹತ್ತಿ ಬೆಲೆ ಇವನ್ನು ಮಾತ್ರ ಕೇಳಲು ಉತ್ಸಾಹಿಗಳು, ಉಳಿದ ಎಂಟರಲ್ಲಿ ಒಬ್ಬ, ಏಳು ಜನರ ಪೈಕಿ ನಾಲ್ಕು ಜನರಿಗೆ ಯಾವುದನ್ನು ಕೇಳಬೇಕು, ಯಾವುದನ್ನ ಕೇಳಬಾರದು ಎಂಬ ಪರಿಜ್ಞಾನವೇ ಇಲ್ಲ; ಅವರು ರೇಡಿಯೋ ತಂದಿರಿಸಿಕೊಂಡಿರುವುದು, ನೆರೆಮನೆಯವರನ್ನು ಪೀಡಿಸುವುದಕ್ಕಾಗಿ, ಮಾವ ಅದನ್ನು ಕೊಟ್ಟ ತಪ್ಪಿಗಾಗಿ, ಸಾಲ ಕೊಟ್ಟವನಿಂದ ಅದನ್ನು ಆ ರೂಪವಾಗಿ ಹಿಂದಕ್ಕೆ ಪಡೆದದ್ದಕ್ಕಾಗಿ ಅಳಿಯ ರೇಡಿಯೋ ಏಜಂಟಾದದ್ದರಿಂದ.

ಇನ್ನು, ಯಾರಿಗಾಗಿ ಡಾ|| ಕೇಸ್ಕರ್‌ರ ಸುಧಾರಣೆಗಳು? ಶೇಕಡ ೩ ಜನ ರೇಡಿಯೋ ಪ್ರಿಯರಿಗಾಗಿ. ಅವರಲ್ಲಿ ಒಬ್ಬರಿಗೆ ಅದರಿಂದ ಆಗಬೇಕಾದ ಉಪಕಾರ ತಮ್ಮ ಕೈ ಗಡಿಯಾರ ಸರಿಯೋ ತಪ್ಪೋ ಎಂಬ ಪರೀಕ್ಷೆ. ಮತ್ತೊಬ್ಬ ಮನೆ ಮಕ್ಕಳನ್ನು ಬೆದರಿಸಿ ನಿದ್ದೆ ಮಾಡಿಸುವುದಕ್ಕೆ. ಉಳಿದವನಿಗೆ ಹೆಂಡತಿಯ ಕಾಟ ತಪ್ಪಿಸಿ ತೆಪ್ಪಗೆ, ಇದರ ಆರ್ಭಟೆ ಎಷ್ಟೋ ವಾಸಿ, ಎಂದು ಅದರ ಮುಂದೆ ಹಚ್ಚಿ ಕೂರಲು ಆದ್ದರಿಂದ, ಡಾ|| ಕೇಸ್ಕರ್‌ರವರು ತಮ್ಮ ಅಧಿಕಾರ ವಲಯಕ್ಕೊಳಪಟ್ಟ ರೇಡಿಯೋ ವ್ಯವಸ್ಥೆಯಲ್ಲಿ, ಈ ಅಂಕಿ ಅಂಶಗಳನ್ನು ಅವಗಾಹನೆಗೆ ತಂದುಕೊಂಡು, ತಕ್ಕ ಬದಲಾವಣೆಗಳನ್ನು ತರುವುದು ಸೂಕ್ತ.

—ಶ್ರೀವತ್ಸ.

—o—



" ದ್ವಾದಶೀ ವ್ರತದ್ದು ಮಂತ್ರದ ರಿಕಾರ್ಡು ಕೊಂಡುಕೊಳ್ಳಿ, ರಾಯರೇ—
ಪುರೋಹಿತರನ್ನು ಕಾಯೋ ಗೋಜೇ ಇರೋಲ್ಲ ! "

ನನ್ನ ಸೇವೆ

ಪಾರ್ಲಿಮೆಂಟಿನ ಪ್ರಮುಖ ಸದಸ್ಯರು, ಅಸೆಂಬ್ಲಿಯ ಅತಿರಥಮಹಾರಥರು, ಎಂದು ಮುಂತಾಗಿ ಕನ್ನಡ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುತ್ತಿರುವ ವಾರ್ತಾ ಪ್ರಚಾರಕರು ನನ್ನನ್ನು ತೀರ ಮರೆತಿರುವುದು ನಿಜ ಶೋಚನೀಯ, ಏಕೆಂದರೆ, ನನ್ನಷ್ಟು ಪ್ರಜಾಸೇವೆ, ನನ್ನಷ್ಟು ದೇಶಕಲ್ಯಾಣಕ್ಕಾಗಿ ದುಡಿಮೆ, ಬೇರೊಬ್ಬ ಪ್ರತಿನಿಧಿಯೂ ಮಾಡುತ್ತಿರುವಂತೆ ನನಗೆ ತೋರುವುದಿಲ್ಲ.

ಮತದಾನ ಮುಹೂರ್ತದಲ್ಲೂ ನಾನು ಮೋಸಮಾಡಲಿಲ್ಲ. ನನ್ನನ್ನರಿತೇ ನನ್ನವರು ನನಗೆ ವೋಟನ್ನಿತ್ತರು. 'ನೀನು ಊರಲ್ಲಿರಬೇಡ; ದೂರ ಎಲ್ಲಾದರೂ ಹೋಗಿ ಬಾಳು" ಎಂದು ಅವರು ನನ್ನನ್ನು ಆಶೀರ್ವದಿಸಿದರು. ಪ್ರಜೆಗಳ ಕಷ್ಟ ಸುಖಗಳನ್ನರಿಯಲು ನಾನು ಯಾವಾಗಲೂ ಮೂರನೆಯ ತರಗತಿಯಲ್ಲೇ ಪ್ರಯಾಣ ಮಾಡುತ್ತಿರುವೆನು, ಸರ್ಕಾರದವರು ಎಂಥ ಉತ್ತಮ ದರ್ಜೆಯ ಭತ್ಯವನ್ನಿತ್ತರೂ.

ಗಂಟೆ ಗಟ್ಟಲೆ ಭಾಷಣಗಳನ್ನಿತ್ತು, ಕಾಲವಿಳಂಬ ಮಾಡಿ, ಸಭೆಯ ಕಾರ್ಯ ತಾನಾಗಿಯೇ ಸರಿಹೋಗ ಬಹುದಾದ ದೇಶದ ಸಮಸ್ಯೆಗಳಿಗೂ, ನಾನು ಅಡ್ಡಿ ತಂದದ್ದೇ ಇಲ್ಲ. ಅಷ್ಟೇಕೆ? ನನ್ನಿಂದ ಅಚ್ಚಿನ ವೆಚ್ಚ ಏಕೆ ಹೆಚ್ಚು ಬೇಕೆಂಬ ನಿಶ್ಚಯದಿಂದ ನಾನು ಮಾತನಾಡುವುದನ್ನೇ ನಿಲ್ಲಿಸಿದೇನೆ. ಅಕ್ಕ ಪಕ್ಕದವರೊಂದಿಗೆ ಪಿಸುಗುಟ್ಟುವುದೇ ನನ್ನ ಹೆಚ್ಚಿನ ಭಾಷಣ ವೈಖರಿ. ಅಧ್ಯಕ್ಷರು ನನ್ನಕಡೆ ತಿರುಗಿದ ಕೂಡಲೇ ಅದನ್ನ ನಾ ನಿಲ್ಲಿಸಿ ಬಿಡುತ್ತಿದೇನೆ.

ಆಡಳಿತ ಸೂತ್ರ ಸುಲಲಿತವಾಗಿ ನಡೆಯಲು ನಾನು, ನನ್ನ ಬುದ್ಧಿಗೆ ತೋಚಿದ ಅತ್ಯುತ್ತಮರೀತಿಯಲ್ಲಿ, ನನ್ನ ನಂಟರಿಷ್ಟರ ಪೈಕಿ, ಪ್ರಜಾಸೇವಾ ದೀಕ್ಷಿತರಾದ ಹಲವರನ್ನು, ನಾನೇ ಸರ್ಕಾರಿ ನೌಕರಿಗಳು ಮಾಡುವಂತೆ ಬಲಾತ್ಕರಿಸಿ ಹುದ್ದೆಗಳಿಗೇರಿಸಿ ಹಿಂಸಿಸಿದೇನೆ. ಪಾಪ, ಅವರು ನನ್ನ ಮಾತನ್ನು ಮೀರಲಾರದೆ ಸ್ವತಂತ್ರ ಜೀವನವನ್ನು ತೊರೆದು, ಸಾವಿರಾರು ರೂಪಾಯಿಗಳನ್ನು ಖರ್ಚುಮಾಡುವ ಗೋಜನ್ನು ತಲೆಯಮೇಲೆ ಹೊತ್ತು ತಿರುಗುತ್ತಿದಾರೆ.

ಸಮುದ್ರಯಾನ, ಮ್ಲೇಚ್ಛದೇಶ ಸಂಚಾರ, ಪರಾನ್ನ ಭೋಜನ ಮುಂತಾದ ನಿಷಿದ್ಧ ಪದ್ಧತಿಗಳನ್ನೂ ಪಾತಕಗಳನ್ನೂ ದೇಶಸೇವೆಗಾಗಿಯೂ ಭಾರತದ ಏಳಿಗೆ


ಗಾಗಿಯೂ ನೆರವೇರಿಸಲು ನಾನೂ ಸಿದ್ಧನಿದೇನೆ ಎಂದು ನಮ್ಮ ಪಕ್ಷದ ಪ್ರತಿಷ್ಠಾವಂತರಿಗೆ ನಾನು ಹಗಲಿರುಳೂ ಸೂಚನೆ ಕೊಡುತ್ತಿರುವುದರ ಫಲವಾಗಿ ಸದ್ಯದಲ್ಲೇ ಆ ಪಾಪಕೂಪಗಳಿಗೆ ಬಿದ್ದು ಭಾರತದ ಉದ್ಧಾರಕ್ಕೆ ಕಾರ್ಯವನ್ನು ಮಾಡುವ ಯೋಗ ನನಗೆ ದೊರಕುತ್ತದೆ.

ದೇಶೋದ್ಧಾರವಾಗಬೇಕಾದರೆ, ದೇಶದಲ್ಲಿರುವ ಏಳು ಲಕ್ಷ ಗ್ರಾಮದಲ್ಲೂ, ಒಂದೊಂದು ಸಂಸಾರವೂ ಆನಂದ ಭರಿತವಾಗಬೇಕು. ಊರ್ಧ್ವಮೂಲಂ, ಅತಃ ಶಾಖ, ಎಂಬ ಪರಿಯಲ್ಲಿ, ಇದು. ಮೇಲಿಂದ ಕೆಳಕ್ಕೆ ನಡೆಸುವಂಥ ಸುಧಾರಣೆಯಲ್ಲ— ಇಟ್ಟಿಗೆ ಇಟ್ಟಿಗೆಯಾಗಿ ನಾವು ಕಟ್ಟಡ ಕಟ್ಟಬೇಕು. ನನ್ನ ಮನೆ ನನ್ನ ಹಳ್ಳಿಯಲ್ಲಿನ ಒಂದು ಇಟ್ಟಿಗೆ. ಅದನ್ನು ನಾನು ಭದ್ರಪಡಿಸಿದರೆ, ನನ್ನ ಹಳ್ಳಿ ಅಷ್ಟಕ್ಕಷ್ಟು ಭದ್ರ; ನನ್ನ ದೇಶ ಅಷ್ಟಕ್ಕಷ್ಟು ಭದ್ರ. ಇದನ್ನರಿತು, ನಾನು, ನನ್ನ ಈ ಐದು ವರ್ಷಗಳ ಸದವಕಾಶದಲ್ಲಿ, ನನ್ನ ಮನೆಯನ್ನು ಉತ್ತಮಪಡಿಸುತ್ತಿದೇನೆ.

ಹೀಗಿದ್ದರೂ, ನನ್ನ ಹೆಸರನ್ನು ಆ ಲೇಖಕರು ಹೊರಗೆಡಹದೆ ಇರುವುದು ಅವರ ಸಂಕುಚಿತಯನ್ನೋ ಭಾವವನ್ನೋ ತೋರಿಸುತ್ತಿದೆ. ಇದರಿಂದ, ನಾನು ಗುಪ್ತವಾಗಿ ಮಾಡುತ್ತಿರುವೆ, ಸದ್ಯಃ ಗುಪ್ತವಾಗಿಯೇ ಉಳಿದಿದೆ—

—ಶ್ರೀ

—o—



ವಿಮರ್ಶೆ

ನಿಮ್ಮ ಸಿನಿಮ ನೋಡಿದೆ
ಅರ್ಥ ಮಾತ್ರ ಮೆಚ್ಚಿದೆ;
ಅದೇ, ಆ, ಹಿಂದೆ ಬಂದ
ಹಾಲಿವುಡ್ಡ ಚಿತ್ರದಿಂದ
ನೀವು ಕದಿಯದುಳಿದ ಅರ್ಥ
ಅದನು ಕದಿಯೆ, ಬೆಚ್ಚದೆ,
ಆಗ ಮಾತ್ರ, ನಿಮ್ಮ ಸಿನಿಮ
ನೋಟಕುತ್ತಮೋತ್ತಮ.

ಈ ಪೇಪರ ತುಂಬ ನನ್ನ
ಹೊಗಳಿಕೆ, ಹೊಗಳಿಕೆ !
ಆ ಪೇಪರ ತುಂಬ ನನ್ನ
ತೆಗಳಿಕೆ, ತೆಗಳಿಕೆ!
ಆದರೇನು ? ಎರಡಿಗೂ
ಗಳಿಕೆ, ತುಂಬ, ಗಳಿಕೆ.

ಪೋಸ್ಟರಿಂದ ಸಿನಿಮ ತಾರೆ
ಎಳೆದಳವನ ಕಣ್ಣನು !
ರಸ್ತೆ ಲಾರಿ ಹರಿಯೆ, ತಾನೆ
ಮಲಗೆ ಇದ್ದ, ತಣ್ಣಗೆ!

ವಸ್ತುಪ್ರದರ್ಶನದಲ್ಲಿ ಒಂದು ಸಂಜೆ

ನಾನು ವಸ್ತುಪ್ರದರ್ಶನ ನೋಡಿಕೊಂಡು, ಸುಳ್ಳು, ಸುಳ್ಳು, ವಸ್ತುಪ್ರದರ್ಶನದಲ್ಲಿ ಭಾಗವಹಿಸಿ ಆವತ್ತು ಇನ್ನೇನು ಮನೆಯಕಡೆ ಹೊರಡಬೇಕೆಂದಿದ್ದೆ. ವಸ್ತುಪ್ರದರ್ಶನದಿಂದ ಹೊರಕ್ಕೆ ಹೊರಟುಹೋಗುವುದು ಎಂದರೆ ಅಷ್ಟು ಸುಲಭವೆ? ಹೊಸ ಹೊಸದಾಗಿ ಎಷ್ಟೋ ಜನ ನೋಡುವುದಕ್ಕೆ ಬರುತ್ತಿರುತ್ತಾರೆ. ಅವರಿಗೆಲ್ಲ ಮೋಸ ಮಾಡಿ, ನಿರಾಶೆಗೊಳಿಸಿ ಅವಸರ ಅವಸರವಾಗಿ ಹೊರಟುಹೋಗಿಬಿಟ್ಟರೆ ಏನು ಪ್ರಯೋಜನ? ಹೊಸಬರು ಬರುವುದಾದರೂ ಏತಕ್ಕೆ? ಹಳಬರು ಅಲ್ಲಿರುವುದಾದರೂ ಏತಕ್ಕೆ? ಹೇಗೋ ಒಬ್ಬರಿಗೊಬ್ಬರು ಆಸರೆಯಾಗಿ, ಏಕಮತ್ಯದಿಂದ ಸಹಕರಿಸಿದರೆ ಅಲ್ಲವೆ ಪ್ರದರ್ಶನ ಸುಸೂತ್ರವಾಗಿ, ಜಯಪ್ರದವಾಗಿ ನಡೆಯುವುದು ? ನಿಮಗೆ ಗೊತ್ತಿರುವ ವಿಷಯವನ್ನೇ ಹೇಳಿದೆ, ಕ್ಷಮಿಸಿ!

ವಸ್ತುಪ್ರದರ್ಶನದ ಮಹಾದ್ವಾರದ ಬಳಿಯಲ್ಲೇ ಠಳಾಯಿಸುತ್ತಿದ್ದೆ ಅಂದನಲ್ಲ–ಏನು ಆಶ್ಚರ್ಯ ಸ್ವಾಮಿ! ? ಒಂದು ತಿಂಗಳಿಂದ ತಲೆ ಮರೆಸಿಕೊಂಡು ಕೈಗೆಸಿಕ್ಕದೆ ತಿರುಗುತ್ತಿದ್ದ ನರಸಿಂಗರಾಯ; ಭಾವ, ಮಾವ, ಅತ್ತೆ, ನಾದನಿ; ಇಡೀ ಸಂಸಾರ ಸಮೇತ ಅಲ್ಲಿ, ಆ ಸಂಜೆ, ಹಾಜರಾಗೋದೆ? ಆರು ತಿಂಗಳಹಿಂದೆ ನನ್ನಿಂದ ಕೇವಲ ಹತ್ತು ರೂಪಾಯಿ ಸಾಲ ತೆಗೆದುಕೊಂಡು ಇವತ್ತಿನವರಿಗೂ ಹಿಂದಕ್ಕೆ ಕೊಡದೆ ಸತಾಯಿಸಿಕೊಂಡು ಬರುತ್ತಿರುವ ಭಂಡ ನರಸಿಂಗರಾಯ. ಇವತ್ತು, ನಾಳೆ; ಇವತ್ತು ನಾಳೆ ಅಂತಲೇ ಆರು ತಿಂಗಳಿಂದಲೂ ದಬ್ಬಿಕೊಂಡು ಬಂದ. ನಾನೂ ಎಷ್ಟೋ ತಾಳ್ಮೆಯಿಂದ ಕೇಳುತ್ತ ನನ್ನ ಬುದ್ಧಿಯೆಲ್ಲಾ ಖರ್ಚುಮಾಡಿದೆ. ಕಡೆಗೆ ನನಗೇ ಬೇಜಾರಾಗಿ ಹೋಗಿ 'ಬದುಕಿಕೋ' ಅಂತ ಬಿಟ್ಟುಬಿಟ್ಟಿದ್ದೆ. ಆದರೆ ವಸ್ತುಪ್ರದರ್ಶನದಲ್ಲಿ; ಒಳ್ಳೆ ಠೀಕ್ ಟಾಕ್ ಆಗಿ ಇಸ್ತ್ರಿಮಾಡಿದ ಗರಮಾಗರಂ ಸೂಟು ಹಾಕಿಕೊಂಡು ರಂಗು ರಂಗಿನ ಬಟ್ಟೆ ತೊಟ್ಟ ಹೆಂಡತಿಯೊಡನೆ ಮೆರೆಯಲು ಬಂದ ಅವನನ್ನು ನೋಡಿ ನನಗೆ ಅಸೂಯೆ ಹುಟ್ಟಿತು, ಆ ಸಂಜೆ, ಆ ಬಣ್ಣದ ದೀಪಗಳೆಲ್ಲ ಥಟಕ್ಕನೆ ಹತ್ತಿಕೊಂಡಾಗ! ಭಂಡ ಇವತ್ತು ಸಿಕ್ಕಿಬಿದ್ದ, ಇವತ್ತು ಹೇಗಾದರೂ ವಸೂಲ್ ಮಾಡಿ

ಬಿಡಬೇಕು, ಕೊಡದಿದ್ದರೆ ಅತ್ತೆ–ಮಾವ–ಹೆಂಡತಿ–ಮುಂದೆ 'ಎಕ್ಸಿಬಿಷನ್' ಮಧ್ಯೆ ಚನ್ನಾಗಿ ಅಂದು ಮಾನ ತೆಗೆದುಬಿಡಬೇಕು ಅಂತ ನಿಶ್ಚಯಿಸಿದೆ!.

ಇಂತಹ ಅವಕಾಶವನ್ನು ಕಲ್ಪಿಸಿಕೊಟ್ಟ ಪ್ರದರ್ಶನದ ವ್ಯವಸ್ಥಾಪಕರನ್ನು ಮನಸ್ಸಿನಲ್ಲೇ ವಂದಿಸುತ್ತ ನರಸಿಂಗರಾಯನನ್ನು ಬಹಳ ಎಚ್ಚರಿಕೆಯಿಂದ ಹಿಂಬಾಲಿಸಿದೆ. ಅವನ ಮಾನವನ್ನು ತೆಗೆಯುವ ಕ್ರಮವನ್ನೂ ಯೋಚಿಸಿ ಹಲವಾರು ಪ್ರಾಸಬದ್ಧವಾದ ಮಾತುಗಳನ್ನು ರಚಿಸಿಟ್ಟುಕೊಂಡೆ.

ನೂಕುನುಗ್ಗಲು, ಗಲಾಟೆಯೋ ಗಲಾಟೆ. ನರಸಿಂಗರಾಯನ ಪರಿವಾರ ಯಾವುದೋ ಒಂದು ಸ್ಟಾಲಿಗೆ ನುಗ್ಗಿತು. ಅವರ ಜೊತೆಯಲ್ಲಿದ್ದ ಒಂದು ಪುಟ್ಟ ಹುಡುಗಿ ಅಲ್ಲಿಯೇ ಎತ್ತಕಡೆಯೋ ನೋಡುತ್ತ ನಿಂತಿದ್ದಳು. ಆ ಹುಡುಗಿಯನ್ನು ಮರೆತು ಮನೆಯವರೆಲ್ಲ ಹೊರಟೇಹೋದರು ಮುಂದಕ್ಕೆ. ಆ ಹುಡುಗಿ ತಬ್ಬಿಬ್ಬಾಗಿ, ಅಪ್ಪ, ಅಮ್ಮನನ್ನು ಕಾಣದೆ ಬೊಬ್ಬೆಹೊಡೆಯಲು ಪ್ರಾರಂಭಿಸಿತು. ಅವರನ್ನೇ ಹಿಂಬಾಲಿಸುತ್ತಿದ್ದ ನಾನು ತಕ್ಷಣ ಆ ಹುಡುಗಿಯನ್ನು ಹಿಡಿದುಕೊಂಡು; ಅವಳ ತಂದೆಯ ಬಳಿಗೆ ಕರೆದುಕೊಂಡು ಹೋಗುವುದಾಗಿ ಹೇಳಿ ಸಮಾಧಾನಪಡಿಸಿದೆ. ಆ ಹುಡುಗಿ ಒಪ್ಪಿಕೊಂಡು ಅಳುವುದನ್ನು ನಿಲ್ಲಿಸಿತು. ತಕ್ಷಣ ನಾನು ಆ ದಾರಿ ಬಿಟ್ಟು ಬೇರೆ ದಾರಿ ಹಿಡಿದುಬಿಟ್ಟೆ, ನರಸಿಂಗರಾಯ ಎಚ್ಚೆತ್ತು ಮಗಳನ್ನು ಕಾಣದೆ ಒಬ್ಬನೇ ಹುಡುಕಿಕೊಂಡು ಎಲ್ಲಿ ಹಿಂದಕ್ಕೆ ಬಂದುಬಿಡುತ್ತಾನೋ ಎಂತ.

ತಪ್ಪಿಕೊಂಡಿರುವ ಹುಡುಗಿಸಮೇತ ಮಹಡಿ ಮೇಲಕ್ಕೆ ಹೋದೆ, ಎಕ್ಸಿಬಿಷನ್ ಪ್ರಕಟಣೆಶಾಖೆಯ ಕಛೇರಿಗೆ. ಕಾರ್ಯದರ್ಶಿಗೆ ಹೇಳಿದೆ. ಆ ಹುಡುಗಿಯ ಹೆಸರು, ತಂದೆಯ ಹೆಸರು, ಉದ್ಯೋಗ, ಮನೆ ನಂಬರ್ ಆ ಹುಡುಗಿಯ ವೇಶಭೂಷಣಗಳ ಸ್ಮೆಲ್ಲ ಮೈಕ್ ಮುಂದೆ ಕಿರಿಚಿದೆ. ಒಂದು ನಿಮಿಷದಲ್ಲಿಯೇ ನರಸಿಂಗರಾಯ ಹಾರುತ್ತಬಂದ. ಅತ್ತೆ, ಮಾವ, ಹೆಂಡತಿ ಎಲ್ಲರೂ ಬಿಸಿಸುಯ್ಯುತ್ತ ಓಡಿಬಂದರು. ಮಗಳ ಕೈ ಹಿಡಿದುಕೊಂಡು ಮೈಕ್ ಮುಂದೆ ನಿಂತಿದ್ದ ನನ್ನನ್ನು ನೋಡಿದ ತಕ್ಷಣ ನರಸಿಂಗರಾಯನ ಮುಖ ಹುಣಸೆಹಣ್ಣಿನಂತಾಯಿತು. ಕಂಗೆಟ್ಟು ಮೈ ಮುರಿದ ರೊಯ್ಯನೆ! "ಬಿರುಗಾಳಿಗೆ ಕಂಪಿಸುವ ಸರ್ಪೆಯಂದದಿ." ಸಿಡಿಲು ಗುಡಿಗಿದಂತೆ ಕೊಡ್ತೀಯೋ, ಇಲ್ಲವೊ–ಹತ್ತು ರೂಪಾಯಿ" ಎಂದೆ. ಆಸಾಮಿ ಬೆವರಿ ನೀರಾಗಿ ಹೋದ!

ನಾನು "ಹತ್ತು ರೂಪಾಯಿ" ಅಂದನಲ್ಲ; ಅದನ್ನು ಕೇಳಿದ ಅ ಪ್ರಕಟಣೆ ಶಾಖೆಯ ಉಪಾಕಾರ್ಯದರ್ಶಿಯ ಆಪ್ತ ಕಾರ್ಯದರ್ಶಿಗೆ ಏನೋ ಅನುಮಾನ


ಬಂತು. ಅವನು "ಏನ್ರೀ, ಮಗೂನ ಹುಡುಕಿಕೊಟ್ಟಿದ್ದಕ್ಕೆ ಅವರಿಂದ ಬಹುಮಾನ ತೊಗಳ್ತೀರೇನ್ರೀ" ಎಂದು ನನ್ನ ಮೇಲೆ ಒಂದು ಚಿನುಕುರಳಿಯನ್ನೆಸದ!

ನಾನು ಸಾಲಕೊಟ್ಟಿರುವ ವಿಚಾರವನ್ನೂ, ನರಸಿಂಗರಾಯರ ಭಂಡತನವನ್ನೂ ಅವನಿಗೆ ಮೈಕ್ ಮುಂದೆ ನಾನು ಚನ್ನಾಗಿ ವಿವರಿಸಿದೆ. ಇದನ್ನು ಕೇಳಿ ನರಸಿಂಗ ರಾಯನ ಹೆಂಡತಿ ಕಿಡಿಕಿಡಿಯಾದಳು. ಆಕೆ ಪತಿಯ ಮಾನಭಂಗಮಾಡಲು ನಾಟಕ ದಲ್ಲಿ ಬರುವಂತೆ ಮುಂದು ಮುಂದಕ್ಕೆ ಬಂದಳು. "ನಿಮಗೇನು ಬಂದಿತ್ತು ಹೊತ್ತು! ಪಾಪ ಅವರು ಎಷ್ಟು ಒಳ್ಳೆಯವರು! ಮಗೂನ ಬೇರೆ ಹುಡುಕಿಕೊಟ್ಟಿದಾರೆ. ಅವರ ಹತ್ತು ರೂವಾಯಿ ಮೊದಲು ಕೊಡಿ" ಎಂದು ಮೂತಿ ತಿವಿಯುತ್ತ ಅಂದೇಬಿಟ್ಟಳು. ಮುಂದೇನಾಯಿತು ಅಂತ ಹೇಳಬೇಕೇನು?

ಏನು ಹಾಳು ವಸ್ತುಪ್ರದರ್ಶನ, ಬರಿ ಜನಗಳ ಜಾತ್ರೆ, ಬಳೆ, ಹುರಿಗಾಳು ಅಂಗಡಿಗಳ ಪೈಪೋಟಿ, ಟೇಪು, ಬೆಲೂನ್‌ಗಳ ಹಾವಳಿ ಅಷ್ಟೆ–ಅಂತ ಏನೇನೋ ಬೇಜವಾಬ್ದಾರಿಯಾಗಿ ಟೀಕಿಸಿಬಿಡುತ್ತೀರಲ್ಲ! ಈಗಲಾದರೂ ತಿಳಿಯಿತೆ ವಸ್ತು ಪ್ರದರ್ಶನದಿಂದ ಎಷ್ಟು ಪ್ರಯೋಜನವಿದೆ ಎಂಬುದು!

—ಹಾ. ರಾ.

—o—



ಯೂ. ಎನ್. ಓ.

—

ಜಗ ಜಗ ಜಗವೆಂದು ಜಗವೆಲ್ಲ ಸಾರುತಿ
ಜಗವೆಲ್ಲಿಗೆ ಬಂತೋ, ಯೂ. ಎನ್. ಓ?

ಧಗ ಧಗ ಧಗಿಸುವ ಜಗದಲ್ಲಿ ಸುರಿಯುತಿ
ಮಗುದೊಮ್ಮೆ ಎದೆ ಉರಿ, ಯೂ. ಎನ್. ಓ!

ಹುಟ್ಟುತ ಅಣ ತಮ್ಮ ಬೆಳೆದಾಗ ದಾಯಾದಿ
ಕಟ್ಟಿಟ್ಟ ಕಾದಾಟ, ಯೂ. ಎನ್. ಓ!

ಕರಿ ಬಿಳಿ ಕಾಳಗ, ಅಲ್ಲಲ್ಲಿ ಬಾಂಬಾಟ
ಅಡಿಪಾಯ ಕುಸಿಯಿತೊ, ಯೂ. ಎನ್. ಓ!

ಮಸಣದ ವೈರಾಗ್ಯ ಪಿಸುಣರ ವಹಿವಾಟು
ಮಸೆದ ಕತ್ತಿಯಕಾಟ, ಯೂ. ಎನ್. ಓ!

ಓಂ ಶಾಂತಿ, ಓಂ ಶಾಂತಿ, ಮೂಡಲು ಪಡುವಲು
ನಾಳೆಗೇ ಮುಕ್ತಾಯ, ಯೂ. ಎನ್. ಓ!

—ರುದ್ರಮ್ಮ.

—o—

ಕನ್ನಡದ ಎಲಿಯಟ್ ಕವಿ

ಮೊನ್ನೆ ನಾನು ಆಧುನಿಕ ಆಂಗ್ಲ ಕವಿ ಕುಂಜರ, ನೋಬೆಲ್ ಪಾರಿತೋಷಕ ಎಲಿಯಟ್‌ನ ಕವನ ಸಂಗ್ರಹವನ್ನೋದಿದೆ.

ಆಗ,' ನನಗೆ ಹೊಳೆಯಿತು, ನಮ್ಮೂರು ಚಿಕ್ಕಣ್ಣ ನಿಜಕ್ಕೂ, ಕನ್ನಡದ ಎಲಿಯಟ್, ಎಂಬುದು. ಕನ್ನಡ ಕವಿಗಳಿಗೆ ನೋಬೆಲ್ ಬಹುಮಾನ ಕೊಡುವ ಪದ್ಧತಿ ಇದ್ದರೆ, ಆತನಿಗೇ ಅದು ಮೀಸಲೆಂಬುದು.

ಎಲಿಯಟ್‌ನಂತೆ ಚಿಕ್ಕಣ್ಣನೂ ಜಗತ್ತಿನ ಇಂದಿನ ದುಃಖ ಪರಿಸ್ಥಿತಿಯಿಂದ ತಪ್ತನಾಗಿ, ಶಾಂತಿ ಸಮಾಧಾನ ಸುಖ ಸಂತೋಷ ಇವೊಂದನ್ನೂ ಕಾಣದೆ ಹುಟ್ಟಿ ಸಾಯುವ ಲಕ್ಷೋಪಲಕ್ಷ ದೀನ ದಲಿತರಿಗಾಗಿ ಮರುಗುತ್ತಿದಾನೆ.

ಬೊಗಳುವ ನಾಯಿಯ ಬಾಯಿಗೆ ಕಡುಬು
ಬೊಗಳುವ ನರನನು ಜೈಲಲಿ ಮಡಗು
ಟಿಕ್ ಟಿಕ್ ಟಿಕ್ ಟಿಕ್, ವಾಚ್ಚಿನ ಮುಳ್ಳು
ಕಾಲವು ಓಡುತ್ತ, ಬರಿ ಬರಿ ಸುಳ್ಳು.

ಇದು ಚಿಕ್ಕಣ್ಣನ ಚಿಕ್ಕಂದಿನ ಒಂದು ಕವನದಿಂದ ಆರಿಸಿದ ಒಂದು ಪಂಕ್ತಿ. ಎಲಿಯಟ್‌ನ ಶೈಲಿಯ ವೈಶಿಷ್ಟ್ಯವನ್ನು ಇಲ್ಲಿ ಸಹೃದಯರು ಕಾಣಬಹುದಾಗಿದೆ.

ಸೋಮ ಸಲಾಮನು ಹೊಡೆಯುವ ರೀತಿ
ತಂದೆಗೆ ಎನಿಸಿತು, ಇದು ಹೊಸ ನೀತಿ
ಮಾವಗೆ ತೋರಿತು, ಭಾವವು ಕುಹಕ
ಆದರು, ಏಕೊ, ಮನಮೋಹಕ

ಇದರಲ್ಲಿಯ ಹಾಸ್ಯದಲ್ಲಿ ಎಲಿಯಟ್‌ನ ಛಾಯೆ ತಾನಾಗಿಯೇ ಮೂಡಿದೆ. "ಬಟ್ಟಲು ಬಸಿಗಳ ಖಣ ಖಣ ನಿನದ, ಮಾಣಿಯ ಲಿಸ್ಟಿನ ಬಡ ಬಡ ಸಡಗರ." ಈ ಪಂಕ್ತಿದ್ವಯದ ಶೈಲಿ ಥ್ಲೇಟ್ ನೋಬೆಲ್ ಪಾರಿತೋಷಕದ್ದೇ. ಸಂದೇಹವಿದ್ದರೆ, ನಾನು ಓದಿದ ಗ್ರಂಥವನ್ನು ನೀವೂ ಓದಬೇಕು.

ಎಲಿಯಟ್‌ನಂತೆಯೇ ಚಿಕ್ಕಣ್ಣನೂ ನಾನಾ ಶಾಸ್ತ್ರಗಳಿಂದಲೂ ಪುರಾಣಗಳಿಂದಲೂ ಉಪಮೆಗಳನ್ನು ತನ್ನ ಕವನದೊಳಕ್ಕೆ ತೂರಿಸುತ್ತಾನೆ.

ಅವನ ನಗೆ ಕಾಲ ಕೂಟ
ಏಕಲವ್ಯನ ಓಟ
ನಚಿಕೇತನ ಊಟ
ವಚನಕಾರರ ಮಾಟ
ಆಗ ನಾ ಕಣ್ ತೆರೆದೆ—
ಮರದಡಿಯ ಮಂಥರೆ
ಏಕೈ ಧುರಂಧರೆ!

ಎಂಥ ಪಾಂಡಿತ್ಯ; ಆದರೂ, ಎಂಥ ಸರಳತೆ; ಗಹನ ಗಂಭೀರ, ಮಲ್ಲ ಮಧುರ— ಈ ಕಾವ್ಯ ಶೈಲಿ. ಎಲಿಯಟ್‌ನ ಎರಡನೆಯ ಅವತಾರ, ನಮ್ಮ ಚಿಕ್ಕಣ್ಣ.

ಎಲಿಯಟ್ ಕವಿ ಕಮಿಟಿಗಳನ್ನು ಟೀಕಿಸಿ ಕಾವ್ಯ ಬರೆದು ಕೀರ್ತಿ ಗಳಿಸಿದರೆ, ನಮ್ಮೂರು ಚಿಕ್ಕಣ್ಣ ಕಂಟ್ರೋಲಿನ ಮೇಲೂ ಫಂಡುಗಳ ಮೇಲೂ ಲಾವಣಿಗಳನ್ನೇ ಕಟ್ಟಿ ಮೆರೆದಿರುವನು.

ಮೊದಲು ಕೂಡಿಸಿ ಫಂಡನು
ಕಂಡು ಕಾಣದ ಫಂಡನು
ಅದಕೆ ಫಂಡು, ಇದಕ್ಕೆ ಫಂಡು,
ಉಂಡು ಉಂಡು, ಫಂಡು ಕರಗಿ
ಕೊರಗಿದಾಗ, ಮತ್ತೆ ಫಂಡು

ಎಂಬ ಅವನ ಕವನ ಎಲಿಯಟ್‌ನ 'ರಾಜಕಾರಣಿಯ ತಾಪತ್ರಯ' ಎಂಬ ಕವನದ ಛಾಯೆಯಲ್ಲಿಯೇ ಇದೆ. ಚಿಕ್ಕಣ್ಣನಿಗೆ ಇಂಗ್ಲಿಷ್ ಬರದು; ಆದರೆ, ಎಲಿಯಟ್‌ಗೆ ಒಲಿದ ಕಾವ್ಯ ದೇವಿ ಅವನನ್ನೂ ಅದೇ ರೀತಿ ಒಲಿದಿರುವುದು ಕನ್ನಡದ ಪುಣ್ಯ.

೯೯ ಪಕ್ಷಿಗಳನ್ನು ಸಾಕಿದ ಹಾಡ್ಜ್‌ಸನ್‌ರವರನ್ನು ಎಲಿಯಟ್ ಕೊಂಡಾಡಿದರೆ, ಚಿಕ್ಕಣ್ಣ, ಅದಕ್ಕಿಂತ ಉತ್ತಮ ಕಾವ್ಯ ವಿಷಯವಾದ "ಅನಾಥಾಲಯದ ಮ್ಯಾನೇಜರನ್ನು"ನ್ನು ಕುರಿತು ೧೨೦ ಪಂಕ್ತಿಯ ಒಂದು ಕಾವ್ಯ ರತ್ನವನ್ನು ಬರೆದಿದಾನೆ.

ಆಧುನಿಕ ನಾಗರೀಕತೆಯ ಪೊಳ್ಳು ಜೀವನದ ಮೇಲೆ ಚಿಕ್ಕಣ್ಣನಿಗೂ ಎಲಿಯಟ್‌ನಷ್ಟೇ ಜುಗುಪ್ಸೆ. "ಡನ್‌ಲಪ್ ದೋಸೆ, ಬೆರಣಿ ವಡೆ, ಕಾಗದದ ಹೂವು,

ಬೀಡಿ ವಾಸನೆ, ಎಂಥದಿದು ಜೀವನ, ಕಾಳಿದಾಸನು ಪವನ," ಎಂದು ಅವನೂ ಚೀತ್ಕಾರ ಮಾಡುತ್ತಾನೆ.

ಗೊತ್ತು ಗೊತ್ತು ನನಗೆಲ್ಲ ಗೊತ್ತು
ಹತ್ತು ಗ್ರೋಸು ಸೇದು ಬತ್ತಿ
ಮುಗಿಯಿತೆಂದರೆ, ಜೀವ ಸತ್ತು....
ಎತ್ತು, ಎತ್ತು, ಎನುವರತ್ತ

ಎಂದು ಚಿಕ್ಕಣ್ಣನೂ ಉದ್ಗಾರ ತೆಗೆಯುತ್ತಾನೆ. "ಇಂದು ಬಿಂದಿಗೆ, ನಾಳೆ ಬಾವಿಗೆ" ಎಂಬ ಅವನ ಪದ್ಯದಲ್ಲಿ ಅಸಹ್ಯ ತುಂಬಿದೆ; ನೈರಾಶ್ಯ ತಾಂಡವವಾಡುತ್ತಿದೆ; ಜೀವ ಸಸಿ ಬಾಡಿ ಬೆಂಡಾಗಿದೆ.

ಮೊದಲ ಹಾಳೆಯ ತುಂಬ ಹಾದರ
ಎರಡು ಹಾಳೆಗಳೆಲ್ಲ ಗೋಳು
ಉಳಿದ ಜಾಗದಲೆಲ್ಲ ಮೋಸವು
ಅಚ್ಚು ಮೆಚ್ಚು!....ಅಯ್ಯೋ, ಹಾ, ಹಾ!

ಎಂದು ಟೀಕೆಯನ್ನು ನಾವು ಪ್ರೀತಿಯಿಂದ ಆತುಕೊಂಡು ಅರಗಿಸಿಕೊಳ್ಳಬೇಕಾಗಿದೆ. ಚಿಕ್ಕಣ್ಣನ **ಕಾಕೆಂಬಿ** ಎಂಬ ಪದ್ಯಕ್ಕೂ ಎಲಿಯಟ್‌ನ 'ಟೊಳ್ಳು ಮನುಜರು' ಎಂಬ ಪದ್ಯಕ್ಕೂ ಅರ್ಥಾತ್ ಸಂಬಂಧವಿದೆ; ಅರಿದವರಿಗತಿಸುಲಭಾ ತತ್ವಭೋಧೆ.

ಮನುಷ್ಯ ಎಷ್ಟರವನು, ಜೀವನ ನೀರಿನ ಮೇಲಿನ ಗುಳ್ಳೆ, ಸತ್ಯ ಸುಳ್ಳಿನ ಮೆರುಗು, ಮಾತು ಮಾಟದ ಗೊಂಬೆ, ಕಣ್ಣಿದ್ದೂ ಕುರುಡರಾವು, ಎಂಬ ಪಾಠವನ್ನೇ ಚಿಕ್ಕಣ್ಣನೂ ಬೋಧಿಸುತ್ತಿರುವುದು, ಅವನ ಕವನಗಳ ಮೂಲಕ.

ಚಿಕ್ಕಣ್ಣನ ಕವನಗಳಿನ್ನೂ ಅಚ್ಚಾಗಿಲ್ಲ; ಅಚ್ಚಾದರೆ, ಅವನ್ನು ಇಂಗ್ಲೀಷಿಗೆ ಭಾಷಾಂತರಿಸಿದರೆ, ಆಗ, ಪ್ರಪಂಚ ಅರಿತು ಕೊಳ್ಳುತ್ತದೆ, ಕನ್ನಡನಾಡಿನಲ್ಲೂ ಎಲಿಯಟ್‌ಗಳು ಇದಾರೆ, ಎಂಬುದನ್ನ. ಎಲಿಯಟ್‌ನ ಕಾವ್ಯಗಳು ಸಾರುವ ತತ್ವಗಳು ಪಾಶ್ಚಾತ್ಯರಿಗೆ ಹೊಸವೆನಿಸಬಹುದು; ಆದರೆ, ಕನ್ನಡಿಗರಿಗೆ ಅವು ಹೊಸವಲ್ಲ. ಚಿಕ್ಕಣ್ಣನೇ ಹೇಳುವಂತೆ,

ಕಂಬದಲ್ಲಿನ ಸಿಂಹ, ಹುಂಬನಲ್ಲಿಯ ದೇವ,
ಅಡಗಿ ತಾ ಕುಳಿತಂತೆ ಬಡಗಿಯಾಮಗನಂತೆ

ಕನ್ನಡ ಜನಮನದಲ್ಲಿದ್ದ ಈ ಕವನಗಳನ್ನು ಚಿಕ್ಕಣ್ಣ ಹೊರಸೂಸಿದಾನೆ. ಅವನ್ನು ಹೊರದೇಶಕ್ಕೆ ಸಾಗಿಸುವುದು ನಮ್ಮ—ಏಕೆ, ನನ್ನ—ಕೆಲಸ.

—ಸೂರಿ.

ಲೀಲಳ ಸಿಂಹ

ಕೈ ಹಿಡಿದವಳು ಮನೆಗೆ ಬಂದಾಗ, ಕೈಯಲ್ಲೊಂದು ಪಟವನ್ನೂ ಹಿಡಿದು ಬಂದಳು–ಅವಳು ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ, ಸಣ್ಣ ರೇಶಿಮೆದಾರದಿಂದ ಬಿಳಿ ಬಟ್ಟೆಯಮೇಲೆ ಹೊಲೆದು ಪೋಣಿಸಿ ಅಣಿಮಾಡಿ, ಅವಳ ಶಾಲಾ ಎಕ್ಸಿಬಿಷನ್ನಿಂದ ಮೂರನೆಯ ಬಹುಮಾನ ಪಡೆದ ಒಂದು ಸಿಂಹದ್ದು. ಸಿಂಹದ ಮೇಲು ಭಾಗದ ಅಂತರಿಕ್ಷದಲ್ಲಿ ಎಲ್ ಐ ಓ ಎನ್ ಎಂಬ ನಾಲ್ಕು ಆಂಗ್ಲ ಅಕ್ಷರಗಳನ್ನೂ ರೇಶಿಮೆಯಿಂದಲೇ ರಚಿಸಿದ್ದಳು. ಐಯ ತಲೆಯಮೇಲೆ ಒಂದು ಭಾರಿ ಚುಕ್ಕೆ; ಎನ್‌ನ ಪಕ್ಕದಲ್ಲಿ ಮತ್ತೊಂದು. ಸಿಂಹದ ತಳಭಾಗದ ನೆಲದಲ್ಲಿ ಎಲ್ ಇ ಇ ಎಲ್ ಎ ಎಂಬ ಪಂಚಾಕ್ಷರಿ.

ಮೂರನೆಯ ಬಹುಮಾನ ಪಡೆಯಲು ತೀರ ಅನರ್ಹ, ಮೂವತ್ತನೆಯದನ್ನು ಕೊಟ್ಟರೂ, ಮಹಾ ಪಾಪ, ಆಗ, ಲೀಲಳ ತಂದೆ ಆ ಊರಿನ ಪೋಲೀಸ್ ಇನ್‌ಸ್ಪೆಕ್ಟರಾಗಿದ್ದರಿಂದ, ಶಾಲಾ ಹೆಡ್ಮಾಸ್ತರು ಹೆದರಿ ಅವಳಿಗೆ ಅದನ್ನಿತ್ತಿರಬೇಕೆಂದು ಮಂಜುನಾಥನಿಗೆ ತೋರಿತು.

ಮಂಜುನಾಥನೆ ಲೀಲಳಗಂಡ....ಓಂಕ್ಕೆ ‹ಸೇರಿದ ಮಂಜುನಾಥ, ಅವರಿವರ ಕೃಪಾಕಟಾಕ್ಷದಿಂದ ೧೫೫, ೨೪೦, ೭೭೫ ಹೀಗೆ ಎರಡೇ ವರ್ಷಗಳಲ್ಲಿ ಏರಿ ಹತ್ತಾರು ಜನರ ತಲೆಯಮೇಲೆ ಕಾಲನ್ನಿರಿಸಿ ಕುಳಿತು ಮೆರೆದು, ಮೂಪಲಿಸಿದ. ಅವನ ಅಹಂಕಾರಕ್ಕೂ ದರ್ಪಕ್ಕೂ ಪಾರವೇ ಇರಲಿಲ್ಲ. ತನ್ನ ಜೊತೆಗೆ ಓದಿದವರೆಲ್ಲ ೬೦ ರಲ್ಲೇ ಪೇಚಾಡುತ್ತ; ಕೋ ಆಪರೇಟಿವ್ ಸೊಸೈಟಿ ಸಾಲಗಳ ಕಂತುಕಟ್ಟಲಾರದೆ ತೊಳಲುತ್ತಿರುವಾಗ, ತಾನು ಚಿಕ್ಕುಬುಕ್ಕು ಸಹಿತ ಎರಡನೆಯ ಕ್ಲಾಸಿನಲ್ಲಿ ಒರಗಿ ಮೋಜುಮಾಡಿ ಅವರಕಣ್ಣು ಕುಕ್ಕಿದ. ೪೫ ರೂ. ಮನೆಬಾಡಿಗೆ ಬಿಸಾಕಿದ.

ಆ ಮನೆಗೆ ಲೀಲಳನ್ನು ತಂದ.....ಲೀಲ, ಆ ಪಟವನ್ನೂ ತಂದಳು. ಮುಂದಿನ ಕೋಣೆಯ ಮುಂಬಾಗಿಲಿನ ಮೇಲೆ ಬಂದವರನ್ನು ಕೋರೈಸುವಹಾಗೆ, ಅವಳೇ ಅದನ್ನು ತೂಗು ಹಾಕಿ ಹಿಗ್ಗಿದಳು.

ಆದರೆ, ಮಂಜುನಾಥ ಕಲಾಪ್ರೇಮಿ. ಆದ್ದರಿಂದ, ಅವನಿಗೆ ಆ ಪಟ ತೀರ ಅಸಹ್ಯ. ಅವನು ಅದಕ್ಕಾಗಿ ಲೀಲಳನ್ನು ಬಹುವಾಗಿ ಟೀಕಿಸಿದ. ಅವಳು ರೇಗಿ ಕೂಗಾಡಿ ಕೊನೆಗೆ ಅತ್ತೆ ಬಿಟ್ಟಳು. ಈ ಚಿತ್ರವನ್ನು ಹೀಯಾಳಿಸಿದ. ಅವಳು ಮೂರನೆಯ ಬಹುಮಾನವನ್ನು ತೋರಿಸಿದಳು.

ಎಲ್ ಐ ಓ ಎನ್ ಎಂದು ಲೀಲ ಬರೆದಿದ್ದರೂ, ಅದು ಬೆಕ್ಕಿನಂತೆಯೂ ಇರಲಿಲ್ಲ. ಕೋಳಿಗೂ ಕೋತಿಗೂ ಮದುವೆಯಾಗಿದ್ದಿದ್ದರೆ, ಅವಕ್ಕೆ ಮಕ್ಕಳಾಗಿದ್ದಿದ್ದರೆ,

ಸುಮಾರು ಲೀಲಳ ಎಲ್ ಐ ಓ ಎನ್ ತರಹ ಆಗ್ತಿತ್ತೋ ಏನೋ? ಅಥವ, ಅದೂ ಸಾಲದು. ಆ ಸಂತಾನ ವಿಶೇಷಕ್ಕೆ ಕೆನ್ನೆ ಊದಿ, ಮೊಳಕಾಲು ಮುರಿದು, ಸೊಂಟ ಬಗ್ಗಿ, ಮೂಗು ಡೊಂಕಾಗ್ಗಿ, ಕಣ್ಣು ಬೇನೆ ಬರಬೇಕು. ಆಗ, ಅದು ಹೇಗಿರುತ್ತೋ, ಹಾಗಿತ್ತು, ಲೀಲಳ ಎಲ್ ಐ ಓ ಎನ್.

ಇನ್ನು ಅದನ್ನ ಮಂಜುನಾಥ ಹೇಗೆ ಸಹಿಸಿಯಾನು? ಅದನ್ನು ತೆಗೆದು ಹೊರ ಗೆಸೆಯಲು ಅವನು ಅನೇಕಸಲ ಪಿತೂರಿ ಹೂಡಿದ. ಆದರೆ, ಲೀಲಳ ಕೋಪಕ್ಕೆ ಹೆದರಿ ಸುಮ್ಮನಾದ.

ಕಡೆಗೆ, ಅವನಿಗೆ ಒಂದು ಉಪಾಯ ಹೊಳೆಯಿತು, ಒಂದು ದಿನ, ಪತ್ರಿಕೆ ಓದಿ ದಾಗ ಡೆಲ್ಲಿಯ ಚಿತ್ರಪ್ರದರ್ಶನ ವೊಂದರಿಂದ ಪ್ರಖ್ಯಾತ ಕಲೆಗಾರರೊಬ್ಬರ ಅಮೂಲ್ಯ ಚಿತ್ರವೊಂದನ್ನು ಯಾರೋ ಕಳ್ಳರು ಕದ್ದೊಯ್ದರು ಎಂಬ ಸುದ್ದಿಯನ್ನೋದಿದಾಗ.

ಅಂದೇ ಅವನು ಆ ಸಂಪಾದಕರನ್ನು ಕಂಡು, ಅವರಿಗೆ ಐವತ್ತು ರೂಪಾಯಿ ತೆತ್ತ, ಸಲಕ್ಕೆ ಹತ್ತು ರೂಪಾಯಿನಂತೆ ರೇಟ್ ಮಾತಾಡಿದ.

ಮರು ದಿನ ಅದೇ ಪೇಪರಿನಲ್ಲಿ, "ಡಿಲ್ಲಿಯ ಪ್ರಖ್ಯಾತ ಕಲಾತಸ್ಕರರು ಡಿಲ್ಲಿ ಯಿಂದ ನಾಗಪುರಕ್ಕೆ ಬಂದಿರುವ ಹಾಗಿದೆ. ಅಲ್ಲೂ ಒಂದು ಉತ್ತಮ ಚಿತ್ರದ ಕಳುವು" ಎಂಬ ಸುದ್ದಿ ಬಂತು.

ನಾಲ್ಕು ದಿನಕಳೆದು, "ಅತ್ಯಂತ ಉತ್ತಮ ಚಿತ್ರವೊಂದನ್ನು ಮೊನ್ನೆ ಅರಿತು ನುರಿತ ಕಳ್ಳರ ಗುಂಪು ಮದ್ರಾಸಿನಲ್ಲಿ ಕದ್ದೊಯ್ದರು" ಎಂಬ ಸುದ್ದಿ ಪ್ರಕಟವಾಯಿತು.


ಹೀಗೆ, ಆ ಸಂಪಾದಕರು ಪ್ರಕಟಿಸುತ್ತ ಪ್ರಕಟಿಸುತ್ತ, ಆ ಕಳ್ಳರ ಗುಂಪನ್ನು ಮಂಜುನಾಥನಿದ್ದ ಊರಿಗೇ ತಂದರು.

ನಿನ್ನೆ ಮಂಜುನಾಥ ಅರ್ಧ ರಾತ್ರಿವೇಳೆ, ಲೀಲಳು ಗಾಢ ನಿದ್ರೆಯಲ್ಲಿದ್ದಾಗ, ಹಾಳು ಆ ಅವಲಕ್ಷಣದ ಪ್ರಾಣಿಯನ್ನು ಗೋಡೆಯಿಂದಿಳಿಸಿ, ಆಚೆಗೆ ಸಾಗಿಸಿ, ಸುಟ್ಟು ಬೂದಿಮಾಡಿದ.

ಇವತ್ತು, ಅದೇ ಪತ್ರಿಕೆಯಲ್ಲಿ, "ಶ್ರೀ ಮಂಜುನಾಥರ ಮನೆಯಿಂದ ಅತ್ಯುತ್ತಮ ಕಲಾ ಕೃತಿಯೊಂದನ್ನು ನಿನ್ನೆ ರಾತ್ರಿ, ಡಿಲ್ಲಿ, ನಾಗಪುರ, ಮದರಾಸ್, ಬೆಂಗಳೂರು ಮುಂತಾದ ಪ್ರಮುಖ ನಗರಗಳ ಕಲಾ ಶಾಲೆಗಳಿಂದ ಚಿತ್ರಗಳನ್ನು ಕದಿಯುತ್ತಿದ್ದ ಗುಂಪಿನವರು, ಕದ್ದೊಯ್ದ ಸುದ್ದಿ ಬಂದಿದೆ. ಬಹುಶಃ, ಈ ಗುಂಪಿನವರು, ಪ್ರಪಂಚದ ಅತೀ ಸೊಗಸಾದ ಕಲಾರತ್ನಗಳನ್ನು ಒಂದೆಡೆ ಸೇರಿಸಬೇಕೆಂದು ಬಯ ಸುತ್ತಿರುವರೋ ಏನೊ?" ಎಂದು ಅಚ್ಚಾಗಿದೆ.

ಲೀಲಳ ಸಂತೋಷಕ್ಕೆ ಪಾರವೇ ಇಲ್ಲ. ಮಂಜುನಾಥನಂತೂ, ಕ್ಷೇಮವಾಗಿ ದಾನೆ—

—ಶ್ರೀಮತಿ ಕೇಸರಿ



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮ್ಯಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ — — — ಬೆಂಗಳೂರು 3.



ನಿಮಗಾಗಿಯೇ ಮೀಸಲಾಗಿದೆ
ಡ್ರಾಲಿ
ಮಸ್ಕ್ ಸೋಪ್
ಟಾಲ್ಕ್ ಪೌಡರ್

ಮೈಸೂರಿನ ವಿಶಿಷ್ಟ ತಯಾರಿಕೆಗಳು

— ವಿವಿಧ ವರ್ಣಗಳಲ್ಲಿ —

★

ಮೇಜಿನ ಸಾಮಗ್ರಿಗಳು—ಕಪ್ಪುಗಳು, ಸಾಸರುಗಳು
ಟಂಬ್ಲರುಗಳು, ತಟ್ಟೆಗಳು, ಬೋಗಣಿಗಳು
ಎಲ್ಲ ಬಣ್ಣ ಮತ್ತು ಮಾಟಗಳಲ್ಲಿ.

ಶೃಂಗಾರ ಸಾಮಗ್ರಿಗಳು—ಸೋಪುಗಳು, ಪೌಡರ್
ಡಬ್ಬಿಗಳು, ಕ್ಷೌರದ ಸಾಬೂನು ಮತ್ತು ಮುಲಾಮು
ಡಬ್ಬಗಳು, ಬ್ರಿಲಿಯಂಟೈನ್ ಬಾಕ್ಸ್‌ಗಳು
ಇತ್ಯಾದಿ.


ವಿದ್ಯುತ್ ಸಲಕರಣೆಗಳು—ಕಟ್-ಔಟ್ಸ್, ಸೀಲಿಂಗ್
ರೋಸ್‌ಗಳು ಮತ್ತು ಷೇಡ್-ಕ್ಯಾರಿಯರ್‌ಗಳು,
ಎಲ್ಲ ಆಕಾರ ಮತ್ತು ಸೈಜುಗಳಲ್ಲಿ.

ನಮೂನೆ ಹಾಗೂ ಉಪಯುಕ್ತ ವಸ್ತುಗಳು—
ಗಂಧದ ಕಡ್ಡಿ ದಾನಿಗಳು, ಮಾತ್ರೆ ಭರಣಿಗಳು,
ಶಾಯಿ ಕುಡಿಕೆಗಳು, ಸುಗಂಧದ
ದಾನಿಗಳು ಇತ್ಯಾದಿ.

—o—


ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ

ಮೈಸೂರು ರಸ್ತೆ : : : ಬೆಂಗಳೂರು-೨



"ಪ್ರತಿದಿನದ ಶಕ್ತಿಗೆ
ನಮ್ಮ ಮನೆಯಲ್ಲಿ ನಾವು
ಯಾವಾಗಲೂ ಡಾಲ್ಡದಲ್ಲಿ
ಅಡಿಗೆಮಾಡುತ್ತೇವೆ"
DALDA
HYDROGENATED GROUNDNUT AND TIL OIL
ಡಾಲ್ಡ,
ಸಮತೂಕಾಹಾರದಲ್ಲಿ ನಿಮಗೆ
ಬೇಕಾದ ಶಕ್ತಿಯನ್ನು ಕೊಡುವ
ಕೊಬ್ಬನ್ನು ಒದಗಿಸುತ್ತದೆ


In your Make-up Locks Count a lot...
RAJA
AMLA
HAIR OIL
"HELPS YOU TO KEEP LOCKS OF LOVELY AND LUSTROUS HAIR"
MANYAM & CO.,
BANGALORE - MADRAS - MADURA - BOMBAY.



"ನಾನು ಯಾವಾಗಲೂ

ಲಕ್ಸ್ ಟಾಯಿಲೆಟ್ ಸೋಪನ್ನು

ಉಪಯೋಗಿಸುತ್ತೇನೆ"


ಎಂದು ಪದ್ಮಿನಿ ಹೇಳುತ್ತಾಳೆ

ಬೆಳ್ಳಗಿರುವ ಶುದ್ಧವಾದ ಮತ್ತು ಸುಂದರವಾದ ಸುವಾಸನೆಯುಳ್ಳ
ಈ ಸೋಪು ನಿಮ್ಮ ಚರ್ಮವನ್ನು ಕೂಡಾ ಸುಂದರವಾಗಿಡಲಿ!

ಸಿನೆಮ ತಾರೆಯರ ಸೌಂದರ್ಯದ ಸೋಪು

LTS. 330-50 KN

ನೀವು ನಿರೀಕ್ಷಿಸುತ್ತಿದ್ದ ಕಾರಿನ ಪೆಯಿಂಟು



ಸ್ಪಷ್ಟವಾಗಿ ತಿಳಿಸಿರಿ ಷಾಲಿಮಾರ್ ಸೆಲ್ಯುಲೋಸ್ ಕಾರ್ ಫಿನಿಶ್‌ಗಳು!



- ಆರಿಸಿಕೊಳ್ಳುವಂತೆ 38 ಬಣ್ಣಗಳಿವೆ
- ಬಹಳ ಗಟ್ಟಿಯಾಗಿ ಒಣಗಿ, ಬಾಳುವ ಪೆಯಿಂಟು
- ಎಣ್ಣೆ ಮತ್ತು ಪೆಟ್ರೋಲಿಗೆ ಅಸಾಧ್ಯವಾಗಿರುವದು
- ಅಲ್ಕಲಿ ಮತ್ತು ಆಸಿಡ್‌ಗಳಿಗೆ ಬಹಳವಾಗಿ ಪ್ರತಿಭಟಿಸುವದು
- ಪಾಲಿಶ್ ಮಾಡಿದ್ದಲ್ಲಿ ನಿಜವಾದ "ಪ್ರಕಾಶಮಾನವಾದ" ಥಳಕನ್ನು ಬಹಳ ವರ್ಷಗಳ ತನಕ ಉಳಿಸುವದು
- ಇದೊಂದು ಷಾಲಿಮಾರ್ ತಯಾರಿಕೆ

SHALIMAR PAINT

ಷಾಲಿಮಾರ್

ಸೆಲ್ಯುಲೋಸ್ ಕಾರ್ ಫಿನಿಶ್‌ಗಳು

SHALIMAR PAINT, COLOUR & VARNISH CO., LTD.

POST BOX 136 MADRAS 1